ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೭೯

**ಪಟ್ಟಿ – ೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೪ನೇ ಜುಲೈ, ೨೦೧೫**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ಸ್ಥಳೀಯರನ್ನು ಲೈನ್‌ಮ್ಯಾನ್‌ಗಳಾಗಿ ಆಯ್ಕೆ ಮಾಡುವ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೨ (೧೩೦೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಆಗಿಂದಾಗ್ಗೆ ವಿದ್ಯುತ್ ಕಡಿತವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

F-1 B/B

(ಆ) ಸದರಿ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ಲೈನ್‌ಮ್ಯಾನ್‌ಗಳು ಜಿಲ್ಲೆಯಲ್ಲಿ ಇದ್ದಾರೆಯೇ; ಲೈನ್‌ಮ್ಯಾನ್‌ಗಳ ಒಟ್ಟು ಹುದ್ದೆಯೆಷ್ಟು; ಖಾಲಿಯಾಗಿರುವ ಹುದ್ದೆಗಳು ಎಷ್ಟು;

(ಇ) ಕಳೆದ ಬಾರಿ ಲೈನ್‌ಮ್ಯಾನುಗಳ ಆಯ್ಕೆಯಲ್ಲಿ ಸ್ಥಳೀಯರು ಎಷ್ಟಿದ್ದಾರೆ; (ಮಾಹಿತಿ ನೀಡುವುದು)

(ಈ) ಮಲೆನಾಡು ಪ್ರದೇಶಕ್ಕೆ ಆಯ್ಕೆ ಮಾಡುವ ಲೈನ್‌ಮ್ಯಾನ್‌ಗಳನ್ನು ಆಯಾ ಪ್ರದೇಶದ ಜನರನ್ನು ಆಯ್ಕೆ ಮಾಡಲು ಕಾನೂನಿನಲ್ಲಿ ತಿದ್ದುಪಡಿ ತರಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ಮಡಿಕೇರಿ ನಗರದ ರಸ್ತೆ ಅಭಿವೃದ್ಧಿ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೩ (೧೨೮೩) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪–೧೫ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ನಗರದ ರಸ್ತೆ ಅಭಿವೃದ್ಧಿ ಮಾಡಲು ತಗುಲಿದ ಒಟ್ಟು ಮೊತ್ತವೆಷ್ಟು;

(ಆ) ಸದರಿ ಕಾಮಗಾರಿಗಳ ಟೆಂಡರ್ ಪಡೆದ ಗುತ್ತಿಗೆದಾರರು ಯಾರು; (ಹೆಸರು ಮತ್ತು ವಿಳಾಸ ಸಹಿತ ವಿವರ ನೀಡುವುದು)

(ಇ) ಟೆಂಡರ್‌ದಾರರೇ ಸದರಿ ರಸ್ತೆಗಳ ಅಭಿವೃದ್ಧಿಯನ್ನು ನಿರ್ವಹಿಸಿದ್ದಾರೆಯೆ; ಅಥವಾ Sub Contract ನೀಡಿರುತ್ತಾರೆಯೆ;

ಈ) ನಿರ್ವಹಿಸಿದ ಕಾಮಗಾರಿಗಳು ಕಳಪೆ ಮಟ್ಟದಾಗಿದೆಯೆಂಬ ಸಾರ್ವಜನಿಕರ ಕೂಗು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಇಲಾಖೆಯಲ್ಲಿನ ಫಲಾನುಭವಿಗಳ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೪ (೧೩೦೭) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರಿಗೆ ಕಳೆದ ೨ ವರ್ಷಗಳಲ್ಲಿ ಕೈಗೊಂಡ ಹಾಗೂ ಒದಗಿಸಿದ ಅಭಿವೃದ್ಧಿ ಕಾರ್ಯಗಳು ಯಾವುವು; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಅಭಿವೃದ್ಧಿಪಡಿಸಿದ ಕಾಮಗಾರಿಗಳು ಎಷ್ಟು; ಒದಗಿಸಿದ ಸೌಲಭ್ಯಗಳ ಫಲಾನುಭವಿಗಳ ಸಂಖ್ಯೆ ಎಷ್ಟು; (ಸ್ವ ಉದ್ಯೋಗ ಸಾಲ, ಸಮುದಾಯ ಭವನ ನಿರ್ಮಾಣ ಇತ್ಯಾದಿ ತಾಲ್ಲೂಕುವಾರು ಹಾಗೂ ಜಾತಿವಾರು ವಿವರ ನೀಡುವುದು)

(ಇ) ಅನುದಾನವು ಸಕಾಲಕ್ಕೆ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆಯೇ; ವಿಳಂಬಗೊಂಡಿದ್ದಲ್ಲಿ, ಅದಕ್ಕೆ ಕಾರಣಗಳನ್ನು ನೀಡುವುದು;

(ಈ) ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅನುದಾನ ವಂಚಿತರಾಗಿರುವ ಅಭ್ಯರ್ಥಿಗಳಿಂದ ದೂರುಗಳು ಬಂದಿವೆಯೇ? (ಮಾಹಿತಿ ನೀಡುವುದು)

## ಚಾಮರಾಜನಗರ ಜಿಲ್ಲೆಯ ಹೆದ್ದಾರಿಗಳ ದುರಸ್ತಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೫ (೧೨೮೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಂಜನಗೂಡು-ಚಾಮರಾಜನಗರ ಹೆದ್ದಾರಿಯ ದುರಸ್ತಿ ಮತ್ತು ಡಾಂಬರೀಕರಣ ಕಾರ್ಯ ಅಪೂರ್ಣವಾಗಿದ್ದು ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದುವರೆಗೆ ಆಗಿರುವ ಕಾಮಗಾರಿ ಎಷ್ಟು; ಬಾಕಿ ಇರುವ ಕಾಮಗಾರಿ ಎಷ್ಟು;

(ಆ) ಯಳಂದೂರು-ಕೊಳ್ಳೆಗಾಲ ರಸ್ತೆಯ ದುರಸ್ತಿ ಕಾರ್ಯ ನಿಧಾನಗತಿಯಲ್ಲಿ ಸಾಗಿದ್ದು, ಮದ್ದೂರು ಪಾಲದಿಂದ ಮುಂದಕ್ಕೆ ದುರಸ್ತಿಗಾಗಿ ರಸ್ತೆಯನ್ನು ಅಗೆದಿರುದರಿಂದ ಗುಂಡಿಬಿದ್ದು ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸಂತೇಮರಹಳ್ಳಿ- ತಿ. ನರಸೀಪುರ ರಸ್ತೆಯ ಕಾಮಗಾರಿಯೂ ನಿಧಾನ ಗತಿಯಲ್ಲಿ ನಡೆದಿದ್ದು, ಮೂಗೂರು ಬಳಿಯಿಂದ ನರಸೀಪುರದವರೆಗಿನ ರಸ್ತೆಯನ್ನು ಒಂದು ಕಡೆ ಪೂರ್ತಿ ಅಗೆದಿರುವುದರಿಂದ ವಾಹನ ಓಡಾಟಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಪ್ರಸಕ್ತ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿ ಡಾಂಬರೀಕರಣಕ್ಕೆ ಮಂಜೂರು ಮಾಡಿರುವ, ಬಿಡುಗಡೆ ಮಾಡಿರುವ ಅನುದಾನ ಎಷ್ಟು ; ಕಾಮಗಾರಿಗೆ ನಿಗದಿಪಡಿಸಿರುವ ಕಾಲಮಿತಿ ಎಷ್ಟು; ಮೇಲ್ಕಂಡ ಮೂರು ಪ್ರಮುಖ ರಸ್ತೆ ಕಾಮಗಾರಿಗಳನ್ನು ತೀವ್ರಗೊಳಿಸಿ ವಾಹನ ಸಂಚಾರಕ್ಕೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದು ಯಾವಾಗ?

## ಮೈಸೂರು – ಚಾಮರಾಜನಗರ ಜಿಲ್ಲೆಗಳಲ್ಲಿ ಅರಿಶಿನದ ಬೆಲೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೬ (೧೭೯೫) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅರಿಶಿನ ಬೆಳೆಯುವ ಜಮೀನಿನ ವಿಸ್ತೀರ್ಣ ಎಷ್ಟು; ವಾರ್ಷಿಕ ಅರಿಶಿನದ ಉತ್ಪಾದನಾ ಪ್ರಮಾಣ ಎಷ್ಟು; ಈ ಎರಡೂ ಜಿಲ್ಲೆಗಳಲ್ಲಿ ಬೆಳೆದ ಅರಿಶಿನ ಯಾವ ಮಾರುಕಟ್ಟೆಗೆ ಹೋಗುತ್ತದೆ;

(ಆ) ಅರಿಶಿನ ಬೀಜದ ಬೆಲೆ ದುಬಾರಿಯಾಗಿದ್ದು, ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ರಿಯಾಯಿತಿ ಬೆಲೆಯಲ್ಲಿ ಅರಿಶಿನದ ಬೀಜವನ್ನು ಒದಗಿಸಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ; ಈಗ ಮಾರಾಟ ಮಾಡುತ್ತಿರುವ ಅರಿಶಿನ ಬೀಜದ ಬೆಲೆ ಕ್ವಿಂಟಲ್‌ಗೆ ಎಷ್ಟು?

## ತೋಟಗಾರಿಕಾ ಬೆಳೆಗಳಿಗೆ ಸಹಾಯ ಧನ ನೀಡುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೭ (೧೩೦೩) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಕಾಲಿಕ ಮಳೆಯಿಂದಾಗಿ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಬಾಳೆ ಹಾಗೂ ದಾಳೆಂಬೆ ಬೆಳೆಗಳು ಹಾಳಾಗಿ ರೈತರಿಗೆ ತೊಂದರೆ ಆಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಬಾಳೆ ಹಾಗೂ ದಾಳೆಂಬೆ ಬೆಳೆಯನ್ನು ಬೆಳೆಯುತ್ತಿದ್ದಾರೆ; (ವಿವರ ಒದಗಿಸುವುದು)

(ಇ) ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಬಾಳೆ, ದಾಳೆಂಬೆ ಬೆಳೆಗಳಿಗೆ ಸರ್ಕಾರವು ನೀಡುವ ಸಹಾಯಗಳೇನು ; ಇದಕ್ಕೆ ಇರುವ ಮಾನದಂಡಗಳೇನು;

(ಈ) ಕಳೆದ ವರ್ಷ ಏಪ್ರಿಲ್, ಮೇ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದಾಗಿ ಹಾನಿಗೊಳಗಾದ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ, ಬಾಳೆ ಹಾಗೂ ದಾಳೆಂಬೆ ಬೆಳೆಗಳಿಗೆ ಮಾರ್ಚ್ ತಿಂಗಳಲ್ಲಿ ಕೇಂದ್ರ ಸರ್ಕಾರದಿಂದ ಸಹಾಯಧನವನ್ನು ಕೇಳಲಾಗಿದೆಯೇ; ಹಾಗಿದ್ದರೆ, ಕೋರಲಾಗಿರುವ ಸಹಾಯಧನ ಎಷ್ಟು; ಸಹಾಯಧನ ನೀಡಿದ್ದಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು; ರಾಜ್ಯ ಸರ್ಕಾರದ ಪಾಲು ಎಷ್ಟು;

(ಉ) ಸಹಾಯಧನವನ್ನು ರೈತರಿಗೆ ಯಾವ ಕಾಲಮಿತಿಯಲ್ಲಿ ನೀಡಲಾಗುವುದು?

## ಕಬ್ಬಿಗೆ ತಗಲಿರುವ ಬೀಳಿ ಉಣ್ಣೆ ಕೀಟ ಬಾಧೆಯನ್ನು ನಿಯಂತ್ರಿಸುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೮ (೧೩೦೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೇಶದಲ್ಲಿಯೇ ರಾಜ್ಯವು ಅತಿ ಹೆಚ್ಚು ಕಬ್ಬು ಬೆಳೆಯುವ ರಾಜ್ಯವಾಗಿದ್ದು ಇತ್ತೀಚಿನ ದಿನಗಳಲ್ಲಿ ಉತ್ತರ ಕರ್ನಾಟಕದ ಕಬ್ಬಿಗೆ ಬೀಳಿ ಉಣ್ಣೆ ರೋಗ ಕಾಣಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬೀಳಿ ಉಣ್ಣೆಯ ಕೀಟ ಬಾಧೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಇದರಿಂದ ಅರ್ಥಿಕವಾಗಿ ನಷ್ಟ ಅನುಭವಿಸುತ್ತಿರುವ ರೈತರಿಗೆ ಸರ್ಕಾರವು ಪರಿಹಾರ ನೀಡಲಿದೆಯೇ?

## ಗುತ್ತಿಗೆದಾರರ ಬಿಲ್ ಪಾವತಿಸುವಲ್ಲಿ ಆಗಿರುವ ವಿಳಂಬ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೫೫ (೧೨೫೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಸರ್ಕಾರವು ಕೈಗೊಂಡ ರಸ್ತೆ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ಬಿಲ್ ಪಾವತಿಸದೆ ಉಂಟಾಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ೨೦೧೪–೧೫ನೇ ಸಾಲಿನಲ್ಲಿ ಕೇಂದ್ರ ರಸ್ತೆ ಅಭಿವೃದ್ಧಿ ನಿಧಿಯಲ್ಲಿ ರಾಜ್ಯಕ್ಕೆ ಮಂಜೂರಾದ ಅನುದಾನವೆಷ್ಟು;

(ಇ) ಕೇಂದ್ರ ಸರ್ಕಾರವು ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸುವಲ್ಲಿ ರಾಜ್ಯ ಸರ್ಕಾರಗಳಿಗೆ ವಿಧಿಸಿದ ಮಾನದಂಡಗಳೇನು;

(ಈ) ರಾಜ್ಯದಲ್ಲಿ ೨೦೧೩–೧೪ನೇ ಸಾಲಿನಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು)

(ಉ) ಈಗಾಗಲೇ ಗುತ್ತಿಗೆದಾರರಿಗೆ ಪಾವತಿಸಿದ ಅನುದಾನವೆಷ್ಟು; ಪಾವತಿಸಬೇಕಾದ ಅನುದಾನವೆಷ್ಟು; ಗುತ್ತಿಗೆದಾರರಿಗೆ ಬಿಲ್ಲು ಪಾವತಿ ಮಾಡುವಲ್ಲಿ ವಿಳಂಬವಾಗಲು ಕಾರಣಗಳೇನು? (ಜಿಲ್ಲಾವಾರು ವಿವರ ನೀಡುವುದು)

## ಐ.ಟಿ.ಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು) –**

೧೧೬೦ (೧೨೮೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ ನೌಕಕರ ಗೃಹ ನಿರ್ವಾಣ ಸಹಕಾರ ಸಂಘ ಸ್ಥಾಪನೆಗೊಂಡಿದ್ದು ಯಾವಾಗ; (ನೋಂದಣಿ ಸಂಖ್ಯೆ ಹಾಗೂ ವಿಳಾಸ ಮತ್ತು ಸಂಘದ ವ್ಯಾಪ್ತಿ ಜಿಲ್ಲೆ/ನಗರ/ಗ್ರಾಮಾಂತರವಾರು ಮಾಹಿತಿ ನೀಡುವುದು)

(ಆ) ಸಂಘವು ಸ್ಥಾಪನೆಯಾದ ವರ್ಷದಿಂದ ಇಲ್ಲಿಯವರೆಗೆ ನಿರ್ಮಾಣ ಮಾಡಿರುವ ಬಡಾವಣೆಗಳ ಸಂಖ್ಯೆ ಎಷ್ಟು, ಬಡಾವಣೆಯ ಹೆಸರುಗಳೇನು; (ಸದರಿ ಬಡಾವಣೆಯ ಎಕರೆವಾರು, ಸರ್ವೆ ನಂಬರ್‌ವಾರು ಹಾಗೂ ನಿರ್ಮಾಣ ಮಾಡಿದ ನಿವೇಶನಗಳ ಸಂಖ್ಯೆ, ಅಳತೆವಾರು ಮಾಹಿತಿ ನೀಡುವುದು)

(ಇ) ಸಂಘವು ನಿರ್ಮಾಣ ಮಾಡಿರುವ ಮಲ್ಲತ್ತಹಳ್ಳಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಆ ಪೈಕಿ ಸಂಘದ ಸದಸ್ಯರಿಗೆ ಮತ್ತು ಖಾಸಗಿಯವರಿಗೆ ಹಂಚಿಕೆ ಮಾಡಿರುವ ಸೈಟ್‌ಗಳ ಸಂಖ್ಯೆ ಎಷ್ಟು; (ಸದಸ್ಯರ ವಿಳಾಸ, ಸದಸ್ಯರ ಉದ್ಯೋಗ ಗುರುತಿನ ಪ್ರತಿಯ ದಾಖಲೆಗಳು ಒದಗಿಸುವುದು)

(ಈ) ಸಂಘದ ಸದಸ್ಯರಿಗಲ್ಲದೆ ಖಾಸಗಿಯವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಲ್ಲಿ ಖಾಸಗಿಯವರಿಗೆ ನೀಡಲು ಸರ್ಕಾರದದಿಂದ ಅನುಮತಿ ಪಡೆಯಲಾಗಿದೆಯೇ?

## ಮಲ್ಲತ್ತಹಳ್ಳಿ ಬಡಾವಣೆಯಲ್ಲಿ ಒಂದೇ ಕುಟುಂಬಕ್ಕೆ, ಒಂದಕ್ಕಿಂತ ಹೆಚ್ಚು ನಿವೇಶನವನ್ನು ಹಂಚಿಕೆ ಮಾಡಿರುವುದು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೧ (೧೬೭೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ವತಿಯಿಂದ ಈವರೆಗೂ ನಿರ್ಮಾಣ ಮಾಡಿರುವ ಎಲ್ಲಾ ಬಡಾವಣೆಗಳಲ್ಲಿ ಸಂಘದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ಶೇ. ೧೮ ರಷ್ಟು ಮೀಸಲಾತಿಯನ್ನು ಅನುಸರಿಸಲಾಗಿದೆಯೇ; ಅನುಸರಿಸದಿದ್ದಲ್ಲಿ ಸಂಘದ ಆಡಳಿತ ಮಂಡಳಿ ವಿರುದ್ಧ ಇಲಾಖೆಯವರು ಕೈಗೊಂಡಿರುವ ಕಾನೂನು ಕ್ರಮಗಳೇನು;

(ಆ) ಮಲ್ಲತ್ತಹಳ್ಳಿ ಬಡಾವಣೆಯ ಸರ್ವೆ ನಂ. ೧೦/೧ ರಲ್ಲಿ ನಿವೇಶನ ಹಂಚಿಕೆಯಲ್ಲಿ ಒಂದೇ ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ನಿವೇಶನವನ್ನು ಹಂಚಿಕೆ ಮಾಡಲಾಗಿದೆಯೇ; ಹಂಚಿಕೆ ಮಾಡಿದ್ದರೆ, ಸದಸ್ಯರಿಗೆ ಅಥವಾ ಖಾಸಗಿಯವರಿಗೆ ಹಂಚಿಕೆ ಮಾಡಲಾಗಿದೆಯೇ; ಮಾಡಿದ್ದಲ್ಲಿ ಈ ಬಗ್ಗೆ ಕೈಗೊಂಡ ಕಾನೂನು ಕ್ರಮಗಳೇನು; (ಅವರ ಹೆಸರು, ವಿಳಾಸದ ವಿವರ ನೀಡುವುದು)

(ಇ) ಸಂಘದ ಸದಸ್ಯರುಗಳಿಗೆ ನಿವೇಶನ ಹಂಚಿಕೆಯಲ್ಲಿ ೩೦(ಬಿ) ನಿರ್ದೇಶನ ಉಲ್ಲಂಘನೆಯಾಗಿದೆಯೇ; ಜೇಷ್ಠತೆ ಉಲ್ಲಂಘನೆಯಾಗಿದೆಯೇ; ಸಹಕಾರ ಸಂಘಗಳ ಕಾಯ್ದೆ, ಕಾಲಂ ಬೈಲಾ, ಉಲ್ಲಂಘನೆಯಾಗಿದೆಯೇ; ಇಲ್ಲವೇ, ಆಗಿದ್ದಲ್ಲಿ ಸಂಘದ ಆಡಳಿತ ಮಂಡಳಿ ವಿರುದ್ಧ ಇಲಾಖೆಯವರು ಕೈಗೊಂಡಿರುವ ಕಾನೂನು ಕ್ರಮಗಳೇನು?

## ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆಗಳು ನಿರ್ಮಾಣ ಮಾಡಿರುವುದು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೨ (೧೬೭೪) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ವತಿಯಿಂದ ನಿರ್ಮಾಣ ಮಾಡಿರುವ ಬಡಾವಣೆಗಳಲ್ಲಿ ಸರ್ಕಾರದ ಜಮೀನಿನ ಗೋಮಾಳ ಹಾಗೂ ಕೆರೆ ಒತ್ತುವರಿಯಾಗಿದೆಯೇ;

(ಆ) ಬಡಾವಣೆಗಳ ನಿರ್ಮಾಣಕ್ಕೆ ನೀಲಿ ನಕ್ಷೆಗಳನ್ನು ಯಾವ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿದೆ; ಅನುಮೋದನೆ ಪಡೆದ ನಂತರ ಪ್ರಾಧಿಕಾರದ ನಿಯಮಗಳು ಉಲ್ಲಂಘನೆಯಾಗಿದೆಯೇ; ಇಲ್ಲವೇ;

(ಇ) ನಿರ್ಮಾಣ ಮಾಡಿರುವ ಬಡಾವಣೆಗಳಲ್ಲಿ ಸಿ.ಎ ನಿವೇಶನ ಹಾಗೂ ಪಾರ್ಕಿನ ಜಾಗಗಳು ದುರ್ಬಳಕೆ ಆಗಿದೆಯೇ; ಇಲ್ಲವೇ; ಆಗಿದ್ದಲ್ಲಿ, ಸಂಘದ ಆಡಳಿತ ಮಂಡಳಿ ಮತ್ತು ಸಂಘದ ಕಾರ್ಯದರ್ಶಿಯ ವಿರುದ್ಧ ಇಲಾಖೆಗಳು ಕೈಗೊಂಡಿರುವ ಕ್ರಮಗಳೇನು;

(ಈ) ಮಲ್ಲತ್ತಹಳ್ಳಿ ಬಡಾವಣೆಯಲ್ಲಿ ಸಿ.ಎ ನಿವೇಶನ ಹಾಗೂ ಪಾರ್ಕ್ ಜಾಗಗಳನ್ನು ದುರ್ಬಳಕೆ ಮಾಡಿ ನಿವೇಶನವಾಗಿ ಪರಿವರ್ತಿಸಿ ಖಾಸಗಿಯವರಿಗೆ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕಾನೂನು ಕ್ರಮಗಳೇನು?

## ಐ.ಟಿ.ಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಆಡಳಿತ ಅವಧಿಯಲ್ಲಿ ಅವ್ಯವಹಾರ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೩ (೧೬೪೫) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಆಡಳಿತದ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಇಲಾಖೆಯವರು ಸಂಘದ ಕಾರ್ಯದರ್ಶಿ ಮತ್ತು ಆಡಳಿತ ಮಂಡಳಿಯ ವಿರುದ್ಧ ಸಹಕಾರ ಸಂಘಗಳ ಕಾಯ್ದೆಗೆ ಕಾಲಂ ೨೯ (ಸಿ) ಅಡಿಯಲ್ಲಿ ಕ್ರಮ ಜರುಗಿಸಿರುವ ಪ್ರಕರಣಗಳು ಎಷ್ಟು; ಅವು ಯಾವುವು;

(ಆ) ಸಹಕಾರ ಸಂಘಗಳ ಕಾಯ್ದೆಗೆ ಕಾಲಂ ೬೫ರ ಅಡಿ ಸಮಗ್ರ ತನಿಖೆಗಾಗಿ ಇಲಾಖೆಯಿಂದ ನೋಟೀಸ್ ಜಾರಿ ಮಾಡಲಾಗಿದೆಯೇ; ವಿಚಾರಣೆ ಮುಗಿದು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆಯೇ; (ಮಾಹಿತಿ ಒದಗಿಸುವುದು)

(ಇ) ಈವರೆಗೂ ಬಡಾವಣೆಗಳಲ್ಲಿ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಕಾನೂನು ಉಲ್ಲಂಘನೆ ಆಗಿದೆಯೇ; ಆಗಿದ್ದಲ್ಲಿ, ಇಲಾಖೆಯು ಆಡಳಿತ ಮಂಡಳಿಯ ವಿರುದ್ಧ ಕೈಗೊಂಡಿರುವ ಕಾನೂನು ಕ್ರಮಗಳೇನು;

(ಈ) ಈವರೆವಿಗೂ ನಿರ್ಮಾಣ ಮಾಡಿದ ಪ್ರತಿ ಬಡಾವಣೆಗಳಲ್ಲಿ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ನಿವೇಶನಗಳ ಸಂಖ್ಯೆ ಎಷ್ಟು, ಹಂಚಿಕೆ ಮಾಡಿದ ನಿವೇಶನ, ಉಳಿಕೆ ನಿವೇಶನಗಳ ಬಗ್ಗೆ ಸಂಪೂರ್ಣ ವಿವರ ನೀಡುವುದು?

## ಮಲ್ಲತ್ತಹಳ್ಳಿ ಬಡಾವಣೆಯ ಸರ್ವೆ ನಂ. ೧೦/೧ರಲ್ಲಿ ಸಿಎ ಮತ್ತು ಪಾರ್ಕ್ ದುರಪಯೋಗ ಮಾಡಿರುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೪ (೧೬೪೬) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ವತಿಯಿಂದ ಮಲ್ಲತ್ತಹಳ್ಳಿ ಬಡಾವಣೆ ಸರ್ವೆ ನಂ. ೧೦/೧ರಲ್ಲಿ ನಿರ್ಮಾಣ ಮಾಡಿರುವ ಸಿ.ಎ ಮತ್ತು ಪಾರ್ಕ್ ಜಾಗವನ್ನು ಪರಿವರ್ತಿಸಿ ನಿವೇಶನ ಹಂಚಿಕೆ ಮಾಡಲು ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆಯಲಾಗಿದೆ; ಪಡೆದಿದ್ದಲ್ಲಿ, ಆ ಇಲಾಖೆಗಳ ಅನುಮತಿ ಪಡೆದ ದಾಖಲೆಗಳ ಪ್ರತಿಗಳನ್ನು ನೀಡುವುದು;

(ಆ) ಸಂಘವು ಬಡಾವಣೆಗಳನ್ನು ನಿರ್ಮಾಣ ಮಾಡಲು ಗುತ್ತಿಗೆದಾರರುಗಳನ್ನು ನೇಮಕ ಮಾಡಿಕೊಂಡಿರುವುದು ಟೆಂಡರ್ ಮೂಲಕವೋ ಅಥವಾ ನೇರ ನೇಮಕವೋ; ಗುತ್ತಿಗೆದಾರರಿಂದ ಬ್ಯಾಂಕ್ ಗ್ಯಾರಂಟಿ ಪಡೆಯಲಾಗಿದೆಯೇ;

(ಇ) ಸಹಕಾರ ಸಂಘದ ಕಾನೂನುಗಳಲ್ಲಿ ಸಹ ಸದಸ್ಯತ್ವ ಪಡೆಯಲು ಶೇ ೧೦ ರಿಂದ ೧೫ರಷ್ಟು ಅವಕಾಶಗಳಿದ್ದರೂ ಮಿತಿಗಿಂತ ಹೆಚ್ಚು ದುರ್ಬಳಕೆ ಆಗಿದೆಯೇ; ಆಗಿದ್ದಲ್ಲಿ, ಮಾಹಿತಿ ನೀಡುವುದು;

(ಈ) ಸಂಘದ ಹಳೆ ಬಡಾವಣೆಗಳ ನಿವೇಶನ ಅಥವಾ ಮೂಲೆ ನಿವೇಶನಗಳನ್ನು ಸಂಘದ ಸದಸ್ಯರುಗಳಿಗೆ ಹರಾಜು ಮಾಡಲಾಗಿದೆಯೇ ಅಥವಾ ಖಾಸಗಿಯವರಿಗೆ ಹರಾಜು ಮಾಡಲಾಗಿದೆಯೇ; ಕಾನೂನಿಗೆ ವಿರುದ್ಧವಾಗಿದ್ದಲ್ಲಿ ಆಡಳಿತ ಮಂಡಳಿಯ ವಿರುದ್ಧ ಕೈಗೊಂಡಿರುವ ಕಾನೂನು ಕ್ರಮಗಳೇನು?

## ಕುಡಿಯುವ ನೀರಿನ ಸಮಸ್ಯೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೫ (೧೨೯೨) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಸ್ಥಳೀಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಆ) ಪ್ರಸಕ್ತ ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ನಗರ ಸ್ಥಳೀಯ ಸಂಸ್ಥೆಗಳವಾರು ವಿವರಗಳನ್ನು ನೀಡುವುದು)

(ಇ) ಬಿಡುಗಡೆ ಮಾಡಿದ ಅನುದಾನದಲ್ಲಿ ನೀರಿನ ಸಮಸ್ಯೆ ನಿವಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಯಾವ–ಯಾವ ವಾರ್ಡು ಮತ್ತು ನಗರಗಳಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಮಾಹಿತಿ ಒದಗಿಸುವುದು)

## ರಸ್ತೆಗಳ ದುರಸ್ತಿ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೬ (೧೨೯೧) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪ್ರಾಂತ್ಯದಲ್ಲಿ ಒಟ್ಟು ಎಷ್ಟು ಕಿ.ಮೀ. ಲೋಕೋಪಯೋಗಿ ರಸ್ತೆಗಳಿವೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಪ್ರಾಂತ್ಯಕ್ಕೆ ಹಾಳಾಗಿರುವ ರಸ್ತೆಗಳ ದುರಸ್ತಿಗೆ ಎಷ್ಟು ಹಣ ಮೀಸಲಿಡಲಾಗಿದೆ; ಯಾವ ಅವಧಿಯಲ್ಲಿ ಈ ಕೆಲಸವನ್ನು ದುರಸ್ತಿ ಮಾಡಲಾಗುತ್ತದೆ? (ಸಂಪೂರ್ಣ ವಿವರ ಒದಗಿಸುವುದು)

## ರೈತರನ್ನು ವಂಚಿಸುತ್ತಿರುವ ಸಕ್ಕರೆ ಕಾರ್ಖಾನೆಗಳು

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೭ (೧೨೯೦) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಕ್ಕರೆ ಕಾರ್ಖಾನೆಗಳು ರೈತರಿಂದ ಖರೀದಿಸುವ ಕಬ್ಬಿನ ತೂಕದಲ್ಲಿ ಕಡಿಮೆ ಪ್ರಮಾಣದ ತೂಕ ತೋರಿಸಿ ವಂಚಿಸಿದ್ದ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆಯೇ;

(ಆ) ಅಂತಹ ಸಕ್ಕರೆ ಕಾರ್ಖಾನೆಗಳು ಯಾವುವು; ಯಾರ ಒಡೆತನದಲ್ಲಿ ಸದರಿ ಕಾರ್ಖಾನೆಗಳಿವೆ; ಟನ್ ತೂಕದ ಕಬ್ಬಿನಲ್ಲಿ ಎಷ್ಟು ಪ್ರಮಾಣದ ಕಡಿಮೆ ತೂಕವನ್ನು ಲೆಕ್ಕದಲ್ಲಿ ತೋರಿಸಿ ವಂಚಿಸಲಾಗುತ್ತಿತ್ತು;

(ಇ) ಇಂತಹ ಸಕ್ಕರೆ ಕಾರ್ಖಾನೆಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಅದೇ ರೀತಿ ರೈತರಿಗೆ ಎಫ್‌ಆರ್‌ಪಿ ಪ್ರಕಾರ ದರ ನೀಡದೆ ಇರುವ ಕಾರ್ಖಾನೆಗಳ ಸಕ್ಕರೆ ದಾಸ್ತಾನುಗಳನ್ನು ವಶಪಡಿಸಿಕೊಳ್ಳಲಾಗಿದೆಯೇ;

(ಈ) ಜಪ್ತಿ ಮಾಡಿಕೊಂಡಿರುವ ಗೋದಾಮಿನ ಸಕ್ಕರೆ ಪ್ರಮಾಣ ಎಷ್ಟು; ಈ ನಿಟ್ಟಿನಲ್ಲಿ ರೈತರಿಗೆ ವಂಚನೆಯಾಗದಂತೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಜರುಗಿಸಲಾಗುವುದು?

## ಬೀದರ್ ಡಿ.ಸಿ.ಸಿ ಬ್ಯಾಂಕಿನಲ್ಲಿ ನಡೆದಿರುವ ನೇಮಕಾತಿ ಪ್ರಕ್ರಿಯೆ

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) –**

೧೧೬೮ (೧೨೮೯) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲಾ ಸಹಕಾರ ಕೇಂದ್ರ (ಡಿ.ಸಿ.ಸಿ) ಬ್ಯಾಂಕ್‌ನಲ್ಲಿ ಕಳೆದ ೫ ವರ್ಷಗಳಲ್ಲಿ ನೇಮಕಾತಿಗೊಂಡ ಹುದ್ದೆಗಳ ಸಂಖ್ಯೆ ಎಷ್ಟು; (ವರ್ಷವಾರು, ಹೆಸರು, ವಿದ್ಯಾರ್ಹತೆ ಮತ್ತು ಪ್ರವರ್ಗಗಳ ವಿವರ ಒದಗಿಸುವುದು)

(ಆ) ಈ ನೇಮಕಾತಿಗಳನ್ನು ಯಾವ ನಿಯಮಗಳನುಸಾರ ಮಾಡಲಾಗಿದೆ; ಒಂದು ಹುದ್ದೆಗೆ ಎಷ್ಟು ಅಭ್ಯರ್ಥಿಗಳನ್ನು ಸಂದರ್ಶಿಸಲಾಗಿದೆ; ಲಿಖಿತ ಪರೀಕ್ಷೆ ನಡೆಸಲಾಗಿದೆಯೇ? (ವಿವರ ಒದಗಿಸುವುದು)

## ಲೋಕೋಪಯೋಗಿ ಇಲಾಖೆ ವತಿಯಿಂದ ಎಸ್‌ಸಿಪಿ ಯೋಜನೆ ಅಡಿಯಲ್ಲಿ ಎಸ್‌ಸಿ/ಎಸ್‌ಟಿ ಯವರಿಗೆ ಮೀಸಲಿಟ್ಟ ಹಣದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬೯ (೧೩೦೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಲೋಕೋಪಯೋಗಿ ಇಲಾಖಾ ವತಿಯಿಂದ ೨೦೧೩-೧೪, ೨೦೧೪-೧೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದವರಿಗೆ ವಿಶೇಷ ಘಟಕ ಯೋಜನೆ (ಎಸ್‌ಸಿಪಿ ಮತ್ತು ಐಎಸ್‌ಪಿ) ಅಡಿಯಲ್ಲಿ ಮೀಸಲಿಟ್ಟ ಹಣ ಎಷ್ಟು; ಈ ಅವಧಿಯಲ್ಲಿ ಖರ್ಚು ಮಾಡಿದ ಹಣ ಎಷ್ಟು;

(ಆ) ಯಾವ ಯಾವ ಕಾರ್ಯಕ್ರಮಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

## ಅಲ್ಪಸಂಖ್ಯಾತ ಇಲಾಖೆಯ ಸೌಲಭ್ಯಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೦ (೧೬೭೨) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ;

(ಆ) ಈ ಯೋಜನೆಗಳ ಅನ್ವಯ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ;

(ಇ) ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು; ಯಾವ ಯಾವ ಸೌಲಭ್ಯ ನೀಡಲಾಗಿದೆ; (ಫಲಾನುಭವಿಗಳವಾರು ವಿವರ ನೀಡುವುದು)

(ಈ) ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ೨೦೧೩–೨೦೧೪, ೨೦೧೪–೧೫ನೇ ಸಾಲಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ;

(ಉ) ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಐ.ಎಸ್.ಬಿ. ಕೈಗಾರಿಕೆ, ಸೇವೆ, ವ್ಯಾಪಾರ, ಕಾರ್ಯಕ್ರಮಗಳ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಹಣ ವಿಸ್ತರಿಸಲಾಗಿದೆ;

(ಊ) ಈ ಯೋಜನೆಗಳ ಅಡಿಯಲ್ಲಿ ನೀಡುವ ಸಬ್ಸಿಡಿ ಹಣ ಎಷ್ಟು?

## ರಾಜ್ಯದ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘದ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೧ (೧೨೯೬) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಟೆಲಿಕಾಂ ನೌಕರರ ಗೃಹ ನಿಮಾಣದ ಸಂಘಗಳಲ್ಲಿ ಸದಸ್ಯರಿಂದ ಸ್ವೀಕರಿಸಿರುವ ಠೇವಣಿ ಮೊತ್ತ ಎಷ್ಟು;

(ಆ) ಈ ಸಂಘದವರು ಇಲಾಖೆಯ ನೌಕರರ ಸದಸ್ಯರನ್ನು ಹೊರತು ಪಡಿಸಿ ಬೇರೆಯವರಿಗೆ ನಿವೇಶನವನ್ನು ಹಂಚಿಕೆ ಮಾಡಲು ಸರ್ಕಾರದ ಅನುಮತಿ ಇದೆಯೇ;

(ಇ) ಮೇಲ್ಕಂಡ ಸಂಘಗಳು ಎಷ್ಟೆಷ್ಟು ನಿವೇಶನಗಳನ್ನು ಆ ಇಲಾಖೆ ನೌಕರರಲ್ಲದವರಿಗೆ ಹಂಚಿಕೆ ಮಾಡಿದೆ? (ವಿವರ ನೀಡುವುದು)

## ರಾಜ್ಯದಲ್ಲಿ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘಗಳ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೨ (೧೨೯೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘಗಳು ಎಷ್ಟಿವೆ; ಅವು ಯಾವುವು; ಎಲ್ಲೆಲ್ಲಿವೆ;

F-2 B/B

(ಆ) ಪ್ರತಿಯೊಂದು ಸಂಘದಲ್ಲಿ ಎಷ್ಟೆಷ್ಟು ಸದಸ್ಯರಿದ್ದಾರೆ;

(ಇ) ಇದುವರೆಗೆ ಸದರಿ ಸಂಘಗಳು ಎಷ್ಟು ಎಕರೆ ಭೂಮಿಯನ್ನು ಗೃಹ ನಿರ್ಮಾಣ ಸಂಘಗಳಿಗಾಗಿ ಸ್ವಾಧೀನ ಪಡಿಸಿಕೊಂಡಿವೆ; ಇದುವರೆಗೆ ಎಷ್ಟು ಸದಸ್ಯರಿಗೆ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಿವೆ?

## ಸಾಲ ಮರುಪಾವತಿ ಮಾಡಿದ ರೈತರಿಗೆ ಪ್ರೋತ್ಸಾಹಧನ ನೀಡದಿರುವ ಕುರಿತು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೩ (೧೬೨೪) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೧–೧೨ ರಿಂದ ೨೦೧೪–೧೫ನೇ ಸಾಲಿನವರೆಗೆ ಮದ್ದೂರು ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್ ವತಿಯಿಂದ ರೈತರಿಗೆ ನೀಡಿರುವ ಸಾಲವೆಷ್ಟು; (ರೈತರ ಹೆಸರು, ಅವರ ತಂದೆಯ ಹೆಸರು ಮತ್ತು ವಿಳಾಸದೊಂದಿಗೆ ವಿವರ ನೀಡುವುದು)

(ಆ) ಸಾಲ ಪಡೆದ ರೈತರಿಗೆ ಬ್ಯಾಂಕ್ ವತಿಯಿಂದ ನೀಡಿರುವ ಪ್ರೋತ್ಸಾಹ ಧನ ಎಷ್ಟು; ಎಷ್ಟು ಜನ ರೈತರಿಗೆ ಈ ಪ್ರೋತ್ಸಾಹ ಧನ ನೀಡಲಾಗಿದೆ; ರೈತರ ಹೆಸರು, ಅವರ ತಂದೆಯ ಹೆಸರು ಮತ್ತು ವಿಳಾಸದೊಂದಿಗೆ ವಿವರ ನೀಡುವುದು;

(ಇ) ಸಾಲ ಪಡೆದ ರೈತರು ಸಮರ್ಪಕವಾಗಿ ಸಾಲವನ್ನು ಮರು ಪಾವತಿ ಮಾಡಿದ್ದರೂ ಸಹ ಕೆಲವು ಅಧಿಕಾರಿಗಳು ವಿನಾಕಾರಣ ರೈತರಿಗೆ ಪ್ರೋತ್ಸಾಹ ಧನ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಸಹಾಯಧನ ನೀಡದೆ ರೈತರಿಗೆ ತೊಂದರೆ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಮಾಗಡಿ ರಸ್ತೆ ಮತ್ತು ಕನಕಪುರ ರಸ್ತೆಗಳನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಾಡು ಮಾಡುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೪ (೧೩೦೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ವಾಹನ ದಟ್ಟಣೆ ತಡೆಗಟ್ಟಲು ಮಾಗಡಿ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಾಡಿಸುವ ಚಿಂತನೆ ಸರ್ಕಾರದ ಮುಂದಿರುವುದೇ; ಹಾಗಿದ್ದಲ್ಲಿ, ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಾಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

(ಆ) ಬೆಂಗಳೂರು, ಕನಕಪುರ, ಮಳವಳ್ಳಿ ರಸ್ತೆಯು ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ಕೆಲವು ತಾಲ್ಲೂಕುಗಳಿಗೆ ಹೆದ್ದಾರಿಯಾಗಿರುವುದರಿಂದ ಆ ರಸ್ತೆಯನ್ನೂ ಅದೇ ರೀತಿ ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮಕೈಗೊಳ್ಳುವುದೇ? (ಪೂರ್ಣ ಮಾಹಿತಿ ಒದಗಿಸುವುದು)

## ಬಿಡದಿ ದಾಬೋಲ್ ಗ್ಯಾಸ್ ಪವರ್ ಪ್ಲಾಂಟ್ ಯೋಜನೆ ಕುರಿತು

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೫ (೧೨೯೮) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಡದಿ ದಾಬೋಲ್ ಗ್ಯಾಸ್ ಪವರ್ ಪ್ಲಾಂಟ್ ಯೋಜನೆ ಬಗ್ಗೆ ಕರೆಯಲಾಗಿದ್ದ ಟೆಂಡರ್ ರದ್ದುಗೊಳಿಸಿದ ವಿರುದ್ಧ ಕೆಲವು ಬಿಡ್ಡುದಾರರು ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಈ ಬಗ್ಗೆ ನ್ಯಾಯಾಲಯದ ಆದೇಶ ಬಂದಿರುವುದೇ; ಬಂದಿದ್ದಲ್ಲಿ, ಆದೇಶದ ಪ್ರತಿಯನ್ನು ಒದಗಿಸುವುದು.

(ಆ) ಬಿಡದಿ ದಾಬೋಲ್ ಗ್ಯಾಸ್ ಯೋಜನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಇ) ಯಲಹಂಕ ಡೀಸೆಲ್ ಪವರ್ ಪ್ಲಾಂಟ್ ನಿಂದ ಗ್ಯಾಸ್ ಪವರ್ ಪ್ಲಾಂಟ್‌ಗೆ ಬದಲಾಯಿಸಲಾಗಿದೆಯೇ; ಬದಲಾಯಿಸಿದ್ದು, ಯಾವಾಗ; ಇಲ್ಲದಿದ್ದಲ್ಲಿ, ಕಾರಣವೇನು?

## ತೆಂಗು ಉತ್ಪನ್ನಗಳ ಮೌಲ್ಯವರ್ಧನೆಗೆ ಪಾರ್ಕ್‌ಗಳ ಸ್ಥಾಪನೆ

**ಶ್ರೀ ಅಶ್ವತ್ ನಾರಾಯಣ** (ವಿಧಾನಸಭೆಯಿಂದ ಚುನಾಯಿತರಾದವರು) –

೧೧೭೬ (೧೩೦೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರೈತರು ತೆಂಗಿನ ಮರಗಳಿಂದ ನೀರಾ ಉತ್ಪಾದಿಸಲು ಇರುವ ಅಡಚಣೆ ನಿವಾರಿಸಲು ಅಬಕಾರಿ ಕಾಯ್ದೆಗೆ ತಿದ್ದುಪಡಿ ತರಲಾಗುವುದೆಂದು ಸರ್ಕಾರವು ಅಶ್ವಾಸನೆ ನೀಡಿದ್ದು ನಿಜವೇ; ಅದರಂತೆ, ಅಬಕಾರಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆಯೇ;

(ಆ) ತೆಂಗು ಉತ್ಪನ್ನಗಳ ಮೌಲ್ಯವರ್ಧನೆಗೆ ೫ ಪಾರ್ಕ್‌ಗಳನ್ನು ಸ್ಥಾಪಿಸಲಾಗುವದೆಂದು ಸರ್ಕಾರ ಘೋಷಣೆ ಮಾಡಿತ್ತೇ; ಅದರಂತೆ, ತೆಂಗು ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆಯೇ; ಎಲ್ಲೆಲ್ಲಿ ಸ್ಥಾಪಿಸಲಾಗಿದೆ;

(ಇ) ತೆಂಗು ಬೆಳೆಗಾರರಿಗೆ ಮೌಲ್ಯವರ್ಧನೆ ಸಂಸ್ಕರಣೆ, ಕಟಾವಿನ ನಂತರ ನಿರ್ವಹಣೆಗಾಗಿ ತೆಂಗು ಅಭಿವೃದ್ಧಿ ಮಂಡಳಿ ಸಹಾಯಧನ ನೀಡಲಾಗಿದೆಯೇ, ಇದರ ಜೊತೆಗೆ ಸರ್ಕಾರದ ವತಿಯಿಂದ ಸಹಾಯ ಧನವಾಗಿ ಶೇಕಡಾ ೨೫% ನೀಡಲಾಗುತ್ತಿದೆಯೇ; ಅದರಂತೆ ತೆಂಗು ಉತ್ಪಾದನಾ ಸಂಸ್ಕರಣ ಘಟಕಗಳಿಗೆ ನೀಡಲಾಗುತ್ತಿದೆಯೇ? (ವಿವರ ನೀಡುವುದು)

## ಸಹಕಾರ ಸಂಘಗಳಿಂದ ರೈತರಿಗೆ ನೀಡುವ ಕಡಿಮೆ ಬಡ್ಡಿ ಸಾಲದ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೭ (೧೭೮೪) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡುವ ಕಡಿಮೆ ಬಡ್ಡಿ ದರದ ಸಾಲದ ಪ್ರಮಾಣವನ್ನು ಸರ್ಕಾರ ಕಡಿಮೆ ಮಾಡಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

(ಆ) ಕಳೆದ ವರ್ಷ ಈ ರೀತಿ ನೀಡಿರುವ ಸಾಲದ ಪ್ರಮಾಣವೆಷ್ಟು; ಎಷ್ಟು ಜನ ರೈತರಿಗೆ ನೀಡಲಾಗಿದೆ; ನೀಡಿರುವ ಸಾಲದ ಮೊತ್ತವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಈ ಪೈಕಿ ನಬಾರ್ಡ್‌ನಿಂದ ಬಂದಿರುವ ಮೊತ್ತವೆಷ್ಟು, ಸದರಿ ಮೊತ್ತದ ಪ್ರಮಾಣವು ಈ ಆರ್ಥಿಕ ವರ್ಷದಲ್ಲಿ ಕಡಿಮೆಯಾಗಿದೆಯೇ; ಈ ಸಾಲ ಪಡೆಯಲು ರೈತರಿಗೆ ಸರ್ಕಾರ ವಿಧಿಸಿರುವ ನಿಯಮಗಳೇನು;

(ಈ) ಯಾವ ಪ್ರಮಾಣದಲ್ಲಿ ನಬಾರ್ಡ್ ಪಾಲಿನ ಅನುದಾನ ಕಡಿಮೆಯಾಗಲಿದೆ; ಇದನ್ನು ಸರ್ಕಾರ ಹೇಗೆ ಸರಿದೂಗಿಸುತ್ತದೆ; ಇದರ ಪರಿಣಾಮ ರಾಜ್ಯದ ರೈತರ ಮೇಲೆ ಆಗುವುದಿಲ್ಲವೇ; ಸರ್ಕಾರದ ಮುಂದಿನ ಕ್ರಮಗಳೇನು? (ವಿವರ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಹನಿ ನೀರಾವರಿಗೆ ಅರ್ಜಿಕೊಟ್ಟ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೮ (೧೩೧೦) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಹನಿ ನೀರಾವರಿಗೆ ಅರ್ಜಿಕೊಟ್ಟ ಮತ್ತು ಹನಿ ನೀರಾವರಿ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ಹೆಸರು ಸಮೇತ ವಿವರ ಒದಗಿಸುವುದು)

(ಆ) ಎಷ್ಟು ಫಲಾನುಭವಿಗಳಿಗೆ ಸಹಾಯಧನ ದೊರೆತಿದೆ ಎಷ್ಟು ಜನರಿಗೆ ದೊರೆಯಬೇಕು; ಈ ವಿಳಂಬಕ್ಕೆ ಕಾರಣವೇನು; (ತಾಲ್ಲೂಕುವಾರು ಗ್ರಾಮವಾರು ಮಾಹಿತಿ ಒದಗಿಸುವುದು)

(ಇ) ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥ ಪಡಿಸಲಾಗುವುದು ಯಾವಾಗ?

## ಕೃಷಿ ಭಾಗ್ಯ ಯೋಜನೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭೯ (೧೩೦೫) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಕೃಷಿ ಭಾಗ್ಯ ಯೋಜನೆ ಆರಂಭಿಸಿದ್ದು ಯಾವಾಗ; (ಯೋಜನಾವಾರು ವಿವರ ನೀಡುವುದು)

(ಆ) ~~ಈ~~ ಯೋಜನೆಯಡಿ ಒದಗಿಸಲಾಗುವ ಸೌಲಭ್ಯವೇನು; ಹಾವೇರಿ ಜಿಲ್ಲೆಯ ಎಷ್ಟು ಕೃಷಿ ನಿರತ ರೈತರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗಿದೆ; ಇದಕ್ಕಾಗಿ ಅನುಸರಿಸಲಾಗಿರುವ ಮಾನದಂಡವೇನು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

## ತುಪ್ಪದ ಈರೇಕಾಯಿ ಬೆಳೆಯನ್ನು ಅಭಿವೃದ್ಧಿಪಡಿಸುವುದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೧೮೦ (೧೬೫೦) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತುಪ್ಪದ ಈರೇಕಾಯಿ ತರಕಾರಿಯನ್ನು ಎಲ್ಲೆಲ್ಲಿ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ; (ವಿವರ ನೀಡುವುದು)

(ಆ) ಇದು ಯಾವ ಪ್ರದೇಶದ ಬೆಳೆಯಾಗಿದೆ; ಇದರ ವಿಶೇಷತೆಗಳೇನು; ಆರೋಗ್ಯದ ಪ್ರಾಮುಖ್ಯತೆಗಳೇನು;

(ಇ) ಸದರಿ ತುಪ್ಪದ ಈರೇಕಾಯಿ ಬೆಳೆಯು ನಶಿಸಿಹೋಗುತ್ತಿರುವುದು ನಿಜವೇ;

(ಈ) ಇದನ್ನು ಉಳಿಸಿ ಬೆಳೆಸಿ ಅಭಿವೃದ್ಧಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು? (ವಿವರಿಸಿ ನೀಡುವುದು)

## ಬೆಸ್ಕಾಂನಲ್ಲಿ ಮೀಟರ್ ಖರೀದಿಯಲ್ಲಿ ಅಕ್ರಮ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೧೮೧ (೧೬೩೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪-೧೫ನೇ ಸಾಲಿನಲ್ಲಿ ಬೆಸ್ಕಾಂ ಮೀಟರ್ ಖರೀದಿ ಟೆಂಡರ್ ಮತ್ತು ಪೂರೈಕೆಯಲ್ಲಿ ಭಾರಿ ಅಕ್ರಮ ನಡೆದಿರುವ ಆರೋಪ ವ್ಯಕ್ತವಾಗಿರುವುದು ನಿಜವೇ ;

(ಆ) ನಿಜವಾಗಿದ್ದಲ್ಲಿ ಈ ಕುರಿತು ಯಾವ ರೀತಿಯ ಪರಿಶೀಲನೆ ನಡೆಸಲಾಗಿದೆ ;

(ಇ) ಮೀಟರ್ ಖರೀದಿ ದರದಲ್ಲಿ ಎಷ್ಟು ಪ್ರಮಾಣದ ಅವ್ಯವಹಾರ ಕಂಡು ಬಂದಿದೆ ; ತೆಗೆದುಕೊಂಡಿರುವ ಕಠಿಣ ಕ್ರಮಗಳೇನು ;

(ಈ) ಸರಬರಾಜು ಮಾಡಿರುವ ಮೀಟರುಗಳ ಗುಣಮಟ್ಟ ಸರಿಯಾಗಿದೆಯೇ ;

(ಉ) ಗುಣಮಟ್ಟ ಸರಿಯಿಲ್ಲವಾದಲ್ಲಿ ಅದಕ್ಕೆ ಪರಿಹಾರವೇನು ?

## ಕಬ್ಬಿನ ಬಾಕಿ ಹಣ ಪಾವತಿ ಮಾಡುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೧೮೨ (೧೬೪೯) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ಕಬ್ಬಿನ ಬಾಕಿ ಹಣ ಪಾವತಿ ಮಾಡದೆ ಸಕ್ಕರೆ ಕಾರ್ಖಾನೆಗಳಲ್ಲಿನ ಸಕ್ಕರೆಯನ್ನು ಸರ್ಕಾರವು ಜಪ್ತಿ ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ಅಂತಹ ಕಾರ್ಖಾನೆಗಳು ಯಾವುವು; ಜಪ್ತಿ ಮಾಡಿದ ಸಕ್ಕರೆಯ ಪ್ರಮಾಣ ಎಷ್ಟು; (ವಿವರ ನೀಡುವುದು)

(ಆ) ಈ ರೀತಿ ಸಕ್ಕರೆ ಜಪ್ತಿ ಮಾಡಿದ್ದು ಯಾವಾಗ; ಜಪ್ತಿ ಮಾಡಿದ ಸಕ್ಕರೆಯನ್ನು ಮಾರಾಟ ಮಾಡಲಾಯಿತೆ; ಇಲ್ಲವಾದಲ್ಲಿ, ಕಾರಣವೇನು;

(ಇ) ಜಪ್ತಿ ಮಾಡಿದ ಸಕ್ಕರೆಯ ಬದಲಾಗಿ, ರೈತರಿಗೆ ಕಬ್ಬಿನ ಬಾಕಿ ಹಣ ಪಾವತಿಸಲಾಯಿತೆ; ಇಲ್ಲವಾದಲ್ಲಿ ಎಷ್ಟು ದಿನದಲ್ಲಿ ಪಾವತಿಸಲಾಗುವುದು?

## ಟೋಲ್ ಸಂಗ್ರಹಿಸುತ್ತಿರುವ ರಸ್ತೆಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೧೧೮೩ (೧೬೪೮) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಟೋಲ್ ಸಂಗ್ರಹಿಸುತ್ತಿರುವ ರಸ್ತೆಗಳಲ್ಲಿ, ಹಣದ ತೊಂದರೆ ಇರುವವರು, ಪರ್ಯಾಯ ಸರ್ವೀಸ್ ರಸ್ತೆಗಳಲ್ಲಿ ಸಂಚರಿಸುವ ವ್ಯವಸ್ಥೆ ಇಲ್ಲದ ರಸ್ತೆಗಳು ಯಾವುವು; ಅಂತಹ ಟೋಲ್‌ಗಳಲ್ಲಿ ಸಂಗ್ರಹಿಸುವ ಟೋಲ್ ದರದ ವಿವರ ನೀಡುವುದು;

(ಆ) ಎಲ್ಲಾ ಟೋಲ್ ಸಂಗ್ರಹಿಸುವ ರಸ್ತೆಗಳ ಪಕ್ಕದಲ್ಲಿ ಸರ್ವೀಸ್ ರಸ್ತೆಗಳ ಅನುಕೂಲ ಕಲ್ಪಿಸಬೇಕೆನ್ನುವ ನಿಯಮ ಕಡ್ಡಾಯವಾಗಿಲ್ಲವೇ;

(ಇ) ಬಡವರ್ಗದ ಜನರು ತಮ್ಮ ವಾಹನಕ್ಕೆ ರೋಡ್ ಟ್ಯಾಕ್ಸ್ ಪಾವತಿಸಿದ್ದರೂ, ಈ ರೀತಿಯ ರಸ್ತೆಗಳಲ್ಲಿ ಸಂಚರಿಸಲು ಪರ್ಯಾಯ ಸರ್ವೀಸ್ ರಸ್ತೆ ಕಲ್ಪಿಸಲು ಸರ್ಕಾರ ಮುಂದಾಗುವುದೇ?

## ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ವಿದ್ಯುತ್ ಬೇಡಿಕೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೧೮೪ (೧೬೩೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೃಹ, ಔದ್ಯೋಗಿಕ ಮತ್ತು ವಾಣಿಜ್ಯ ಬಳಕೆಗಳಿಗಾಗಿ ವಿದ್ಯುತ್‌ಗೆ ಇರುವ ಬೇಡಿಕೆ ಪ್ರಮಾಣ ಎಷ್ಟು; (ವಿವರ ನೀಡುವುದು)

(ಆ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿದ್ಯುತ್ ಬೇಡಿಕೆಯ ವಾರ್ಷಿಕ ಹೆಚ್ಚಳದ ವಿವರ ನೀಡುವುದು;

(ಇ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿದ್ಯುತ್ ಬಳಕೆದಾರರು ವಿದ್ಯುತ್ ಬಿಲ್ಲಿನ ಬಾಬ್ತನ್ನು ನಿಗದಿತ ಅವಧಿಯೊಳಗೆ ಪಾವತಿಸದೇ ಇರಲು ಕಾರಣಗಳೇನು, ಬಾಕಿ ಇರುವ ಮೊತ್ತ ಎಷ್ಟು; (ವಿವರ ನೀಡುವುದು)

(ಈ) ವಿದ್ಯುತ್ ಬೇಡಿಕೆಯನ್ನು ಪೂರೈಸಲು ಬೆಂಗಳೂರಿನ ಸುತ್ತಮುತ್ತ ಪ್ರತ್ಯೇಕ ಘಟಕವನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ವಿವರ ನೀಡುವುದು)

## ಅವೈಜ್ಞಾನಿಕ ರಸ್ತೆ ಉಬ್ಬರಗಳ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೧೮೫ (೧೬೧೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಕೊಡಗು ಹೆದ್ದಾರಿಯಲ್ಲಿರುವ ಅವೈಜ್ಞಾನಿಕ ರಸ್ತೆ ಉಬ್ಬರಗಳಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿರುವುದು ಹಾಗೂ ಸುಗಮ ಸಂಚಾರ ವ್ಯವಸ್ಥೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ರಸ್ತೆಯಲ್ಲಿ ಕಾನೂನು ಉಲ್ಲಂಘಿಸಿ ಅವೈಜ್ಞಾನಿಕವಾಗಿ ಹಾಕಲಾಗಿರುವ ರಸ್ತೆ ಉಬ್ಬುಗಳನ್ನು ಯಾವಾಗ ತೆರವುಗೊಳಿಸಲಾಗುತ್ತದೆ; ಹಾಕಲಾಗಿರುವವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

## ಮೂಲಭೂತ ಸೌಲಭ್ಯಗಳ ಕಾಮಗಾರಿ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೧೮೬ (೧೩೬೯) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ನಗರೋತ್ಥಾನ ಯೋಜನೆಯಡಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು)

(ಆ) ಈ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ತಯಾರಿಸುವ ಕ್ರಿಯಾ ಯೋಜನೆಯ ಮೊತ್ತ ಮತ್ತು ಕಾಮಗಾರಿಗಳ ಸಂಖ್ಯೆ ಎಷ್ಟು;

(ಇ) ಇದುವರೆವಿಗೂ ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ ಹಾಗೂ ಮಾಡಲಾದ ವೆಚ್ಚ ಎಷ್ಟು? (ವಿವರ ನೀಡುವುದು)

## ಕೃಷಿ ಯಾಂತ್ರಿಕ ಸಲಕರಣೆಗಳಿಗೆ ಹಂಚಿಕೆಯಾದ ಸಬ್ಸಿಡಿ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೧೮೭ (೧೬೨೦) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಕೃಷಿ ಯಾಂತ್ರಿಕ ಸಲಕರಣೆಗಳಿಗೆ ಹಂಚಿಕೆಯಾದ ಸಬ್ಸಿಡಿ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಹಾಗೂ ಈ ಸಬ್ಸಿಡಿ ಹಣವನ್ನು ವಿತರಿಸಲು ಇರುವ ಮಾನದಂಡಗಳೇನು;

(ಇ) ರಾಜ್ಯದಲ್ಲಿ ಕಳೆದ ೩ ವರ್ಷಗಳ ಅವಧಿಯಲ್ಲಿ ಸಬ್ಸಿಡಿ ಹಣಕ್ಕಾಗಿ ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ ಎಷ್ಟು;

(ಈ) ಇದರಲ್ಲಿ ಎಷ್ಟು ರೈತರಿಗೆ ಸಬ್ಸಿಡಿ ಹಣವನ್ನು ನೀಡಲಾಗಿದೆ? (ವಿವರ ನೀಡುವುದು)

## ರಾಜ್ಯದ ವಿವಿಧ ತರದ ರಸಗೊಬ್ಬರದ ಬೇಡಿಕೆ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೧೮೮ (೧೬೨೧) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ತರದ ರಸಗೊಬ್ಬರದ ವಾರ್ಷಿಕ ಬೇಡಿಕೆ ಎಷ್ಟು; (ವಿವರ ನೀಡುವುದು)

(ಆ) ಈ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಕೆ ಮಾಡಲಾಗುತ್ತಿದೆಯೇ;

(ಇ) ಇಲ್ಲವಾದಲ್ಲಿ, ಈ ಬೇಡಿಕೆಗಳನ್ನು ಪೂರೈಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ರಾಜ್ಯದಲ್ಲಿ ರೈತರಿಗೆ ಅವಶ್ಯವಿರುವ ರಸಗೊಬ್ಬರ ಬೇಡಿಕೆಯನ್ನು ಯಾವ ಯಾವ ವಿಧದಿಂದ ಹಂಚಿಕೆ ಮಾಡಲಾಗುತ್ತಿದೆ?

## ಡಿ.ಸಿ.ಸಿ ಬ್ಯಾಂಕುಗಳಿಂದ ಬೆಳೆ ಸಾಲ ನೀಡಿರುವ ಬಗ್ಗೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೮೯ (೧೬೧೮) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಡಿ.ಸಿ.ಸಿ. ಬ್ಯಾಂಕುಗಳ ಮೂಲಕ ೨೦೧೩-೧೪ನೇ ಸಾಲಿನಲ್ಲಿ ರೈತರಿಗೆ ಎಷ್ಟು ಬಡ್ಡಿ ದರದಲ್ಲಿ ಬೆಳೆ ಸಾಲವನ್ನು (ಕೆಸಿಸಿ) ವಿತರಿಸಲಾಗಿದೆ;

(ಆ) ೨೦೧೩-೧೪ನೇ ಸಾಲಿನಲ್ಲಿ ವಿತರಿಸಿರುವ ಬೆಳೆ ಸಾಲವನ್ನು (ಕೆಸಿಸಿ) ೨೦೧೪-೧೫ನೇ ಸಾಲಿನಲ್ಲಿ ವಸೂಲಾತಿ ಮಾಡಿರುವ ಸಾಲಕ್ಕೆ ರಾಜ್ಯ ಸರ್ಕಾರದಿಂದ ಯಾವ ದರದಲ್ಲಿ ಬಡ್ಡಿ ಸಹಾಯಧನ ನೀಡಲಾಗುತ್ತಿದೆ; ಇದರಲ್ಲಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು;

(ಇ) ೨೦೧೪-೧೫ನೇ ಸಾಲಿನಲ್ಲಿ ವಸೂಲಾತಿಯಾಗಿರುವ ಬೆಳೆ ಸಾಲಕ್ಕೆ ಕೇಂದ್ರ ಸರ್ಕಾರದಿಂದ ಸಕಾಲದಲ್ಲಿ ಮರು ಪಾವತಿಸಿದ ರೈತರಿಗೆ ಸಹಾಯಧನ ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ, ಯಾವ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ;

(ಈ) ೨೦೧೩-೧೪, ೨೦೧೪-೧೫ನೇ ಸಾಲುಗಳಲ್ಲಿ ಸಾಲ ಮರುಪಾವತಿ ಉತ್ತೇಜಿಸಲು ಕೇಂದ್ರ ಸರ್ಕಾರ ನೀಡುತ್ತಿರುವ ಬಡ್ಡಿ ಸಹಾಯಧನವನ್ನು ರೈತರಿಗೆ ಹಂಚಲಾಗುತ್ತಿದೆಯೇ; ಹಾಗೂ ೨೦೧೫-೧೬ಕ್ಕೆ ಮುಂದುವರೆಸಲಾಗಿದೆಯೇ;

(ಉ) ಕೇಂದ್ರ ಸರ್ಕಾರ ಸಕಾಲದಲ್ಲಿ ಮರುಪಾವತಿಸಿದ ರೈತರಿಗೆ ನೀಡಬೇಕಾದ ಪ್ರೋತ್ಸಾಹಧನವನ್ನು ರಾಜ್ಯ ಸರ್ಕಾರ ನೀಡುತ್ತಿರುವ ಬಡ್ಡಿ ಸಹಾಯಧನಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರದ ಮುಂದಿರುವ ಯೋಜನೆ ಯಾವುದು? (ಇದ್ದಲ್ಲಿ, ವಿವರವನ್ನು ನೀಡುವುದು)

## ಬೆಳೆಸಾಲ ವಿತರಿಸಲು ಪುನರ್‌ಧನ ಯೋಜನೆ ನಿಗದಿಪಡಿಸುವ ಬಗ್ಗೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯೦ (೧೬೩೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಡಿ.ಸಿ.ಸಿ ಬ್ಯಾಂಕುಗಳ ಮೂಲಕ ೨೦೧೫–೧೬ನೇ ಸಾಲಿಗೆ ಬೆಳೆ ಸಾಲ ವಿತರಿಸಲು (ಕೆ.ಸಿ.ಸಿ) ನಬಾರ್ಡ್ ತನ್ನ ಪುನರ್‌ಧನ ಯೋಜನೆಯಲ್ಲಿ ಪುನರ್‌ಧನಮಿತಿಯನ್ನು ನಿಗದಿಪಡಿಸಿದೆಯೇ; ನಿಗಧಿಪಡಿಸಿದಲ್ಲಿ ೨೦೧೫–೧೬ನೇ ಸಾಲಿಗೆ ಶೇಕಡ ಎಷ್ಟನ್ನು ಡಿಸಿಸಿ ಬ್ಯಾಂಕುಗಳಿಗೆ ಪುನರ್‌ಧನ ನೀಡಲಾಗುತ್ತದೆ;

(ಆ) ೨೦೧೩–೧೪, ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನ ಬೆಳೆ ಸಾಲ ವಿತರಿಸಲು (ಕೆ.ಸಿ.ಸಿ) ನಬಾರ್ಡ್ ತನ್ನ ಪುನರ್‌ಧನ ಯೋಜನೆಯಲ್ಲಿ ಪುನರ್‌ಧನ ಮಿತಿಯನ್ನು ಕಡಿಮೆ ಮಾಡಿದೆಯೇ ಕಡಿಮೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ನಬಾರ್ಡ್ ಪುನರ್‌ಧನ ಮಿತಿಯನ್ನು ೨೦೧೫–೧೬ನೇ ಸಾಲಿಗೆ ಕಡಿಮೆ ಮಾಡಿದ್ದಲ್ಲಿ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಹೆಚ್ಚಿನ ಬೆಳೆ ಸಾಲವನ್ನು (ಹೊಸದಾಗಿ) ನೀಡಲು ಸರ್ಕಾರ ಯೋಜನೆಗಳು ಏನು; ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ಯಾವ ರೀತಿಯಲ್ಲಿ ಈ ಬಗ್ಗೆ ಪ್ರೋತ್ಸಾಹವನ್ನು ಸರ್ಕಾರ ನೀಡುತ್ತಿದೆ?

## ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೯೧ (೧೬೨೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಲದ ಸುಳಿಯಲ್ಲಿ ಸಿಕ್ಕು ಬಡ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ರೀತಿಯ ಆತ್ಮಹತ್ಯೆಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು;;

(ಇ) ಸಕ್ಕರೆ ಕಾರ್ಖಾನೆ ಮಾಲೀಕರುಗಳು ಸಕಾಲದಲ್ಲಿ ರೈತರಿಗೆ ಹಣ ಪಾವತಿಸದಿದ್ದಲ್ಲಿ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದೇ;

(ಈ) ರೈತರು ತಾವು ಬೆಳೆದ ಕಬ್ಬನ್ನು ತಮ್ಮಿಷ್ಟ ಬಂದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸಲು ಅವಕಾಶ ಕಲ್ಪಿಸಲಾಗುವುದೇ;

(ಉ) ರೈತರು ಕಬ್ಬಿನ ಬದಲಾಗಿ ಹಣ್ಣು, ತರಕಾರಿ ಮುಂತಾದ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಲಾಗುವುದೇ?

## ಶಾದಿ ಭಾಗ್ಯವನ್ನು ವಿಸ್ತರಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯೨ (೧೬೬೫) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾದಿ ಭಾಗ್ಯ ಯೋಜನೆಯಲ್ಲಿ ಕಳೆದ ೨ ವರ್ಷಗಳಲ್ಲಿ ಖಾಯ್ದಿರಿಸಿದ, ಖರ್ಚಾದ ಅನುದಾನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಶಾದಿ ಭಾಗ್ಯ ಯೋಜನೆಯ ಪ್ರಸಕ್ತ ಯಾವ–ಯಾವ ಧರ್ಮ, ಜಾತಿಗಳಿಗೆ ಅನ್ವಯವಾಗುತ್ತದೆ;

(ಇ) ಶಾದಿ ಭಾಗ್ಯ ಯೋಜನೆಯಲ್ಲಿ ನೀಡುವ ಪ್ರಯೋಜನೆಗಳೇನು;

(ಈ) ಶಾದಿ ಭಾಗ್ಯ ಯೋಜನೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೇ ಹಿಂದುಳಿದ ವರ್ಗಗಳ ಬಡವರಿಗೂ ವಿಸ್ತರಿಸಲು ಸರ್ಕಾರದ ನಿಲುವೇನು; ಈ ಬಗ್ಗೆ ಸರ್ಕಾರದ ಯೋಚನೆ, ಯೋಜನೆಗಳೇನು? (ವಿವರ ನೀಡುವುದು)

## ನಗರ ಸ್ಥಳೀಯ ಸಂಸ್ಥೆಗಳಲ್ಲಿನ ತರಬೇತಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯೩ (೧೬೬೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರುಗಳ ಸಾಮರ್ಥ್ಯಾಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ನಗರ ಸ್ಥಳೀಯ ಸಂಸ್ಥೆಗಳಿಗೆ ತರಬೇತಿಯನ್ನು ಕಡ್ಡಾಯಗೊಳಿಸಲಾಗಿದೆಯೇ; ಇಲ್ಲವಾದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು;

(ಇ) ನಗರ ಸ್ಥಳೀಯ ಸಂಸ್ಥೆಗಳಲ್ಲಿನ ವಿವಿಧ ಹಂತದ ನೌಕರರು, ಸಿಬ್ಬಂದಿಗಳ ಕೌಶಲ್ಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಘಾಟ್ ರಸ್ತೆಗಳ ಅಭಿವೃದ್ಧಿ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯೪ (೧೬೬೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ರಾಜಧಾನಿ ಮತ್ತು ಕರಾವಳಿಯನ್ನು ಸಂಪರ್ಕಿಸುವ ಶಿರಾಡಿಘಾಟ್ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿಗೆ, ಆಗುಂಬೆ ಘಾಟ್ ರಸ್ತೆ ಅಭಿವೃದ್ಧಿಗೆ ಹುಲಿಕಲ್ ಘಾಟ್ ರಸ್ತೆ ಅಭಿವೃದ್ಧಿ, ಬಾಳೆ–ಬರೆ ಘಾಟ್ ಮತ್ತು ಚಾರ್ಮುಡಿ ಘಾಟ್ ಅಭಿವೃದ್ಧಿಗೆ ಖರ್ಚಾದ ಅನುದಾನ ಎಷ್ಟು; ನಿಗದಿ ಪಡಿಸಿದ ಅನುದಾನ ಎಷ್ಟು; (ಕಳೆದ ೩ ವರ್ಷಗಳ ಮಾಹಿತಿ ನೀಡುವುದು)

(ಇ) ಶಿರಾಡಿ ಘಾಟ್ ಮೂಲಕ ಸುರಂಗ ಮಾರ್ಗ ನಿರ್ಮಾಣ ಮಾಡುವ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ; ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಈ) ಸದರಿ ಯೋಜನೆಯು ಯಾವಾಗ ಕಾರ್ಯರೂಪಕ್ಕೆ ಬರಲಿದೆ? (ವಿವರ ನೀಡುವುದು)

## ಕೃಷಿ ಇಲಾಖೆಯ ಕಾರ್ಯಕ್ರಮ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯೫ (೧೬೬೬) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು ಯಾವುವು;

(ಆ) ಕೃಷಿ ಇಲಾಖೆಯ ವಿವಿಧ ಯೋಜನೆಗಳಿಗೆ ಕಳೆದ ೩ ವರ್ಷಗಳಲ್ಲಿ ಕಾಯ್ದಿರಿಸಿ, ಖರ್ಚಾದ ಅನುದಾನ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಯೋಜನೆ ಮತ್ತು ವರ್ಷಾವಾರು ವಿವರ ನೀಡುವುದು)

F-3 B/B

(ಇ) ಕೃಷಿ ಇಲಾಖೆಯ ಯೋಜನೆಗಳನ್ನು ಜನರಿಗೆ ತಲುಪಿಸಲು, ಯೋಜನೆಗಳ ಪ್ರಚಾರಕ್ಕಾಗಿ ಹಾಗೂ ಪಾರದರ್ಶಕವಾಗಿ ಫಲಾನುಭವಿ ಆಯ್ಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಕೃಷಿ ಇಲಾಖೆಯ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸಿಬ್ಬಂದಿ ಕೊರತೆ ಇರುವುದು ನಿಜವೆ: ಸಿಬ್ಬಂದಿ ನೇಮಕಾತಿಗಾತಿ ಸರ್ಕಾರ ಕೈಗೊಂಡ ಕ್ರಮಗಳೇನು?

## ರಾಜ್ಯದಲ್ಲಿ ಉತ್ಪಾದಿಸುವ ಸೋಲಾರ್ ವಿದ್ಯುತ್ ಪ್ರಮಾಣ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೧೯೬ (೧೬೨೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಉತ್ಪಾದಿಸುವ ಸೋಲಾರ್ ವಿದ್ಯುತ್ ಪ್ರಮಾಣ ಎಷ್ಟು; ವಿಂಡ್ ವಿಲ್ (ಸ್ವಯಂಚಾಲಿತ ಗಾಳಿ ಯಂತ್ರ) ಮೂಲಕ ಉತ್ಪಾದಿಸುವ ವಿದ್ಯುತ್ ಪ್ರಮಾಣ ಯಾವ ಯಾವ ಕಂಪೆನಿಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ; ಯಾವ ದರದಲ್ಲಿ ವಿತರಣೆ ಮಾಡಲಾಗುತ್ತಿದೆ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಲಾರ್ ಮತ್ತು ಸ್ವಯಂ ಚಾಲಿತ ಗಾಳಿ ಯಂತ್ರದಲ್ಲಿ ವಿದ್ಯುತ್‌ನ್ನು ತಯಾರಿಸಲು ಆರಂಭಿಸಲಾಗಿದೆಯೇ; ಇದ್ದಲ್ಲಿ, ಯಾವ ಯಾವ ಕಂಪನಿಗಳಿಂದ ಉತ್ಪಾದನೆ ಮಾಡಲಾಗುತ್ತಿದೆ; (ವಿವರ ನೀಡುವುದು)

(ಇ) ಸೋಲಾರ್ ವಿದ್ಯುತ್‌ನ್ನು ರೈತರ ಪಂಪ್‌ಸೆಟ್‌ಗಳಿಗೆ ಉಪಯೋಗಿಸಲು ರೈತರುಗಳಿಗೆ ಅನುಮತಿ ನೀಡಲಾಗಿದೆಯೇ; ಈ ಬಗ್ಗೆ ನಿಬಂಧನೆಗಳಿವೆಯೇ; ಸರ್ಕಾರದಿಂದ ಈ ಬಗ್ಗೆ ಪ್ರೋತ್ಸಾಹ ನೀಡಲಾಗುತ್ತಿದೆಯೇ? (ವಿವರಣೆ ನೀಡುವುದು)

## ನಗರಸಭೆ, ಪುರಸಭೆ ಮತ್ತು ಸ್ಥಳೀಯ ಪಂಚಾಯಿತಿಗಳ ಕುರಿತು

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೧೯೭ (೧೬೨೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿನ ನಗರಸಭೆ ಮತ್ತು ಪುರಸಭೆ ಸ್ಥಳೀಯ ಪಂಚಾಯತ್‌ಗಳ ಸಂಖ್ಯೆ ಎಷ್ಟು;

(ಆ) ರಾಜ್ಯದಲ್ಲಿರುವ ನಗರಾಭಿವೃದ್ಧಿ ಇಲಾಖಾ ವ್ಯಾಪ್ತಿಯಲ್ಲಿ ಎಷ್ಟು ನಗರಸಭೆ ಪುರಸಭೆಗಳು ನಗರ ಪಾಲಿಕೆಗಳಾಗುವ ಅರ್ಹತೆ ಹೊಂದಿರುತ್ತವೆ; ಹೊಂದಿದ್ದರೆ, ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸುವ ಪುರಸಭೆಗಳು/ನಗರಸಭೆಗಳು ಯಾವುವು; ಅದು ಯಾವ ಹಂತದಲ್ಲಿವೆ?

## ರಬ್ಬರ್ ಕೃಷಿಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೧೯೮ (೧೬೨೭) ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು; ಹೆಕ್ಟೇರುಗಳಲ್ಲಿ ರಬ್ಬರ್ ಕೃಷಿಯನ್ನು ಮಾಡಲಾಗುತ್ತಿದೆ; ಪ್ರಸ್ತುತ ಕೆ.ಜಿ ಒಂದಕ್ಕೆ ಇರುವ ದರ ಎಷ್ಟು; ಉತ್ಪಾದನೆ ವೆಚ್ಚ ಎಷ್ಟು;

(ಆ) ರಬ್ಬರ್ ಬೆಳೆ ಕುಸಿತಗೊಂಡು ಬೆಳೆಗಾರರು ಸಂಕಷ್ಟದಲ್ಲಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ರಬ್ಬರ್ ಕೃಷಿಯ ಬಗ್ಗೆ ರಾಜ್ಯ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ;

(ಇ) ರಾಜ್ಯ ರಬ್ಬರ್ ಬೋರ್ಡು ವಾರ್ಷಿಕವಾಗಿ ನಡೆಸುವ ವ್ಯವಹಾರ ಎಷ್ಟು? (ವಿವರ ನೀಡುವುದು)

## ನಿಡ್ಡೋಡಿ ವಿದ್ಯುಚ್ಛಕ್ತಿ ಯೋಜನೆ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೧೯೯ (೧೬೨೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಿಡ್ಡೋಡಿ ವಿದ್ಯುಚ್ಛಕ್ತಿ ಯೋಜನೆಯನ್ನು ಕೈ ಬಿಡಬೇಕೆಂಬ ಸ್ಥಳೀಯರ ಬೇಡಿಕೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಆ) ಈ ಯೋಜನೆಯು ರಾಜ್ಯ ಸರ್ಕಾರದ್ದೇ ಅಥವಾ ಕೇಂದ್ರ ಸರ್ಕಾರದ್ದೇ; ಈ ಯೋಜನೆ ಕಾರ್ಯಗತಗೊಳಿಸಲು ಎಷ್ಟು ಎಕರೆ ಜಮೀನು ಬೇಕಾಗುವುದು; ಈ ಯೋಜನೆಯನ್ನು ಕೈ ಬಿಡಲಾಗಿದೆಯೇ? (ಪೂರ್ಣ ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇತುವೆಗಳನ್ನು ನಿರ್ಮಿಸುವ ಕುರಿತು

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೨೦೦ (೧೬೨೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಜಿಲ್ಲೆಯಲ್ಲಿರುವ ಪ್ರಮುಖ ರಸ್ತೆಗಳಲ್ಲಿ ಸೇತುವೆಗಳನ್ನು ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)

(ಇ) ವರ್ಷವೊಂದಕ್ಕೆ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು; ಮತ್ತು ಎಷ್ಟು ರಸ್ತೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗುವುದು? (ವಿವರ ನೀಡುವುದು)

## ಲೋಕೋಪಯೋಗಿ ರಸ್ತೆಗಳ ಇಕ್ಕೆಲಗಳಲ್ಲಿರುವ ಜಾಹಿರಾತು ಫಲಕಗಳಿಗೆ ಶುಲ್ಕ ವಿಧಿಸಿದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦೧ (೧೬೩೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಇಕ್ಕೆಲಗಳಲ್ಲಿರುವ ಜಾಹೀರಾತು ಫಲಕಗಳಿಗೆ ವಿಧಿಸಲಾದ ಶುಲ್ಕದಿಂದ ಬಂದ ಆದಾಯವೆಷ್ಟು; (ತಾಲ್ಲುಕುವಾರು, ವರ್ಷವಾರು ವಿವರ ನೀಡುವುದು)

(ಆ) ಲೋಕೋಪಯೋಗಿ ರಸ್ತೆಗಳ ಇಕ್ಕೆಲಗಳಲ್ಲಿ ಜಾಹೀರಾತು ಫಲಕಗಳ ಅಳವಡಿಕೆಗೆ ಇರುವ ಮಾರ್ಗಸೂಚಿಗಳೇನು; ಜಾಹೀರಾತು ಫಲಕಗಳ ಅಳವಡಿಕೆಗೆ ಅನುಮತಿ ನೀಡುವ ಅಧಿಕಾರವನ್ನು ಯಾವ ಯಾವ ಹಂತದ ಅಧಿಕಾರಿಗಳಿಗೆ ನೀಡಲಾಗಿದೆ;

(ಇ) ಉಡುಪಿ ಜಿಲ್ಲೆಯ ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಇಕ್ಕೆಲಗಳಲ್ಲಿ ಜಾಹೀರಾತು ಫಲಕ ಅಳವಡಿಸಲು ಅನುಮತಿ ಕೋರಿಬಂದ ಅರ್ಜಿಗಳೆಷ್ಟು; ಇವುಗಳಲ್ಲಿ ಅನುಮತಿ ನೀಡಲಾದ ಅರ್ಜಿಗಳೆಷ್ಟು; ಅನುಮತಿ ನಿರಾಕರಿಸಲಾದ ಅರ್ಜಿಗಳೆಷ್ಟು; (ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು)

(ಈ) ಲೋಕೋಪಯೋಗಿ ಇಲಾಖೆಯ ರಸ್ತೆಗಳ ಇಕ್ಕೆಲಗಳಲ್ಲಿ ಬಸ್ಸು ಪ್ರಯಾಣಿಕರ ತಂಗುದಾಣ ನಿರ್ಮಿಸುವಾಗ ಲೋಕೋಪಯೋಗಿ ಇಲಾಖೆಯ ಅನುಮತಿಯ ಅಗತ್ಯತೆ ಇದೆಯೇ; ಇಲ್ಲವಾದಲ್ಲಿ ಕಾರಣವೇನು?

## ಕೆಪಿಸಿ ಹೈಡ್ರೋಪವರ್ ಪ್ಲಾಂಟ್‌ನಿಂದ ವಿದ್ಯುತ್ ಉತ್ಪಾದನೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦೨ (೧೬೩೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಒಂದು ವರ್ಷದಲ್ಲಿ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಹೊಸಂಗಡಿಯಲ್ಲಿರುವ ಕೆ.ಪಿ.ಸಿ ಹೈಡ್ರೋಪವರ್ ಪ್ಲಾಂಟ್‌ನಿಂದ ಉತ್ಪಾದನೆಯಾದ ವಿದ್ಯುತ್ತಿನ ಪ್ರಮಾಣ ವೆಷ್ಟು; (ಮಾಸಿಕವಾರು ವಿವರ ನೀಡುವುದು)

(ಆ) ಕಳೆದ ಒಂದು ವರ್ಷದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಂಗಡಿಯಲ್ಲಿರುವ ಕೆ.ಪಿ.ಸಿ ಹೈಡ್ರೋಪವರ್ ಪ್ಲಾಂಟ್‌ನಿಂದ ವಿದ್ಯುತ್ ಉತ್ಪಾದಿಸಿದ ನಂತರ ಹೊರಬಿಡಲಾದ ನೀರಿನ ಪ್ರಮಾಣವೆಷ್ಟು? (ಮಾಸಿಕವಾರು ವಿವರ ನೀಡುವುದು)

## ಉಡುಪಿ ಜಿಲ್ಲೆಯಲ್ಲಿ ಲೋಕೋಪಯೋಗಿ ರಸ್ತೆಗಳಾಗಿ ಮೇಲ್ದರ್ಜೆಗೇರಿದವುಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦೩ (೧೬೩೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರಸ್ತೆಗಳನ್ನು ಲೋಕೋಪಯೋಗಿ ಇಲಾಖಾ ರಸ್ತೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ಮತ್ತು ಯಾವುವು; (ತಾಲ್ಲೂಕುವಾರು, ವರ್ಷಾವಾರು ವಿವರ ನೀಡುವುದು)

(ಆ) ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ ಸಂದರ್ಭದಲ್ಲಿ ವ್ಯರ್ಥ ವೆಚ್ಚ ಮಾಡುವುದಕ್ಕಿಂತ ರಸ್ತೆಗಳ ಅಗಲೀಕರಣಗೊಳಿಸಿ ರಸ್ತೆಗಳನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಕಾರಣವೇನು;

(ಇ) ಬ್ರಿಟಿಷರ ಕಾಲದ ಗಾಡಿ ರಸ್ತೆಗಳನ್ನು ಯಥಾಸ್ಥಿತಿಯಲ್ಲಿಯೇ ಮೇಲ್ದರ್ಜೆಗೇರಿಸುವುದರಿಂದ ಇಂಧನ ಮತ್ತು ಸಮಯ ವ್ಯರ್ಥವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? ಇಲ್ಲವಾದಲ್ಲಿ ಕಾರಣವೇನು?

## ಕೃಷಿ ಸಾಲ ಸೇವಾ ಶುಲ್ಕ ವಿಧಿಸುತ್ತಿರುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦೪ (೧೬೩೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಕೃಷಿ ಸಾಲ ನೀಡುತ್ತಿರುವಾಗ, ಉಡುಪಿ ಜಿಲ್ಲೆಯಲ್ಲಿ ಕೆಲವು ಸಹಕಾರಿ ಸಂಘಗಳು ರೈತರ ಶೂನ್ಯ ಬಡ್ಡಿ ದರ ಕೃಷಿ ಸಾಲಗಳಿಗೆ ಬೇರೆ ಬೇರೆ ಹೆಸರಿನಲ್ಲಿ ೧ ಶೇಕಡಾ ಶುಲ್ಕವನ್ನು ವಿಧಿಸಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಾರದಿದ್ದಲ್ಲಿ, ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದೇ; ಗಮನಕ್ಕೆ ಬಂದಲ್ಲಿ ತೆಗೆದುಕೊಳ್ಳುವ ಕ್ರಮಗಳೇನು?

(ಆ) ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದಿಗ್ಧತೆಯಲ್ಲಿ ರೈತರಿಂದ ವಸೂಲಿ ಮಾಡುತ್ತಿರುವ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದೇ; ಇಲ್ಲವಾದಲ್ಲಿ ಕಾರಣವೇನು; ಕೈಗೊಳ್ಳುವ ಕ್ರಮಗಳೇನು;

(ಇ) ರೈತರಿಂದ ವಸೂಲಿ ಮಾಡಿದ ಹಣವನ್ನು ಪುನ: ರೈತರ ಖಾತೆಗಳಿಗೆ ಜಮಾ ಮಾಡಲಾಗುವುದೇ?

## ರಾಜ್ಯದಲ್ಲಿ ರೈತರ ಆತ್ಮಹತ್ಯೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೦೫ (೧೬೩೧) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ದಾಖಲಾದ ರೈತರ ಆತ್ಮಹತ್ಯೆ ಪ್ರಕರಣಗಳೆಷ್ಟು; ಮತ್ತು ನೀಡಲಾದ ಪರಿಹಾರ ಮೊತ್ತವೆಷ್ಟು; (ತಾಲ್ಲೂಕುವಾರು, ವರ್ಷವಾರು, ಪ್ರಕರಣವಾರು ವಿವರ ನೀಡುವುದು)

(ಆ) ರೈತರ ಆತ್ಮಹತ್ಯೆಯನ್ನು ತಡೆಯಲು ರಾಜ್ಯ ಸರ್ಕಾರ ಹಾಕಿಕೊಂಡ ವಿಶೇಷ ಕಾರ್ಯಕ್ರಮಗಳೇನು; ಮತ್ತು ಕೇಂದ್ರ ಸರ್ಕಾರ ಹಾಕಿಕೊಂಡ ವಿಶೇಷ ಕಾರ್ಯಕ್ರಮಗಳೇನು;

(ಇ) ರಾಜ್ಯದಲ್ಲಿ ಸರ್ಕಾರ ರೈತರಿಗೆ ಬಡ್ಡಿ ರಹಿತ ಸಾಲ ನೀಡುತ್ತಿದ್ದರೂ ಸಹ ಒಂದು ಶೇಕಡ ಸೇವಾ ಶುಲ್ಕವನ್ನು ಕಾನೂನು ಬಾಹಿರವಾಗಿ ವಸೂಲು ಮಾಡುತ್ತಿರುವ ಸಹಕಾರ ಸಂಘಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ; ಇಲ್ಲವಾದಲ್ಲಿ ಕಾರಣವೇನು?

## ಮಾವಿನ ಬೆಳೆ ನಷ್ಟವಾಗಿರುವ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೦೬ (೧೬೩೮) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯ ಎಷ್ಟು ವಿಸ್ತೀರ್ಣದಲ್ಲಿ ಮಾವಿನ ಬೆಳೆಯನ್ನು ಬೆಳೆಯಲಾಗುತ್ತಿದೆ;

(ಆ) ಪ್ರಸಕ್ತ ಸಾಲಿನಲ್ಲಿ ಮಳೆ, ಗಾಳಿ ಹಾಗೂ ಆಲಿಕಲ್ಲಿನಿಂದ ಮಾವು ಬೆಳೆಗಾರರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೆ, ಅದರ ವಿವರಗಳನ್ನು ನೀಡುವುದು;

(ಈ) ಅಂತಹ ಮಾವಿನ ಬೆಳೆಗಾರರಿಗೆ ಸರ್ಕಾರದಿಂದ ಒದಗಿಸಲಾಗಿರುವ ಪರಿಹಾರವೆಷ್ಟು?

## ಕರ್ನಾಟಕ ಬೀಜ ನಿಗಮ ಅಭಿವೃದ್ಧಿಪಡಿಸಿರುವ ತಳಿಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೦೭ (೧೬೩೯) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬೀಜ ನಿಗಮ ಅಸ್ತಿತ್ವಕ್ಕೆ ಬಂದಿದ್ದು ಯಾವಾಗ;

(ಆ) ರಾಜ್ಯದಲ್ಲಿನ ಕೃಷಿ ಚಟುವಟಿಕೆಗಳಿಗೆ ಅವಶ್ಯಕತೆ ಇರುವ ಬಿತ್ತನೆ ಬೀಜದ ಪ್ರಮಾಣ ಎಷ್ಟು; (ಬೆಳೆವಾರು, ತಳಿವಾರು ಮಾಹಿತಿ ನೀಡುವುದು)

(ಇ) ರಾಜ್ಯ ಬೀಜ ನಿಗಮದಿಂದ ಪೂರೈಸಲಾಗುವ ಬಿತ್ತನೆ ಬೀಜದ ಪ್ರಮಾಣ ಎಷ್ಟು; (ಬೆಳೆವಾರು, ತಳಿವಾರು ಮಾಹಿತಿ ನೀಡುವುದು)

F-4 B/B

(ಈ) ಈ ಬಿತ್ತನೆ ಬೀಜಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕರ್ನಾಟಕ ಬೀಜ ನಿಗಮದ ಪಾತ್ರವೇನು;

(ಉ) ಕರ್ನಾಟಕ ಬೀಜ ನಿಗಮದ ಕಾರ್ಯ ಚಟುವಟಿಕೆಗಳೇನು; (ವಿವರ ನೀಡುವುದು)

(ಊ) ಇದುವರೆಗೂ ಕರ್ನಾಟಕ ಬೀಜ ನಿಗಮ ಅಭಿವೃದ್ಧಿಪಡಿಸಿರುವ ತಳಿಗಳು ಯಾವುವು;

(ಋ) ಅಭಿವೃದ್ಧಿಪಡಿಸಿರುವ ಬಿತ್ತನೆ ಬೀಜದ ಪ್ರಮಾಣ ಎಷ್ಟು? (ತಳಿವಾರು ಮಾಹಿತಿ ನೀಡುವುದು)

## ರಾಜ್ಯದ ತೋಟಗಾರಿಕಾ ಇಲಾಖೆಯಲ್ಲಿರುವ ನೌಕರರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೦೮ (೧೬೪೦) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ತೋಟಗಾರಿಕಾ ಇಲಾಖೆಯಲ್ಲಿರುವ ನೌಕರರ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು)

(ಆ) ಹಣಕಾಸು ಇಲಾಖೆಯಿಂದ ಅನುಮೋದನೆಗೊಂಡ ಹುದ್ದೆಗಳು ಎಷ್ಟು; ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು, ಪದನಾಮವಾರು ವಿವರ ನೀಡುವುದು)

(ಇ) ಆ ಪೈಕಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

## ಪ್ಲಾಸ್ಟಿಕ್ ಮುಕ್ತ ಪುರಸಭೆಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೦೯ (೧೬೪೧) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪುರಸಭೆಗಳಲ್ಲಿ ಪ್ಲಾಸ್ಟಿಕ್ ಮುಕ್ತ ಪುರಸಭೆಗಳಾವುವು;

(ಆ) ಎಲ್ಲಾ ಪುರಸಭೆಗಳನ್ನು ಪ್ಲಾಸ್ಟಿಕ್ ಮುಕ್ತ ಪುರಸಭೆಗಳನ್ನಾಗಿ ಮಾಡಲು ಇರುವ ತೊಂದರೆಗಳೇನು;

(ಇ) ಪ್ಲಾಸ್ಟಿಕ್ ನಿಷೇಧವನ್ನು ಕಡ್ಡಾಯವಾಗಿ ಹಾಗೂ ಧನಾತ್ಮಕವಾಗಿ ಕಾರ್ಯರೂಪಕ್ಕೆ ತಂದಿರುವ ಪುರಸಭೆಗಳಿಗೆ ಸರ್ಕಾರ ನೀಡುವ ಉತ್ತೇಜನಗಳಾವುವು?

## ಸಹಕಾರ ಸಂಘಗಳಲ್ಲಿ ಕೃಷಿ ಸಾಲ ಪಡೆದಿದ್ದ ರೈತರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೨೧೦ (೧೬೪೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರ ಸಂಘಗಳಲ್ಲಿ ಕೃಷಿ ಸಾಲ ಪಡೆದಿದ್ದ ಎಷ್ಟು ರೈತರ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿದೆ;

(ಆ) ಕೋಲಾರ–ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಎಷ್ಟು ರೈತರ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಸಂಬಂಧ ಇದುವರೆಗೂ ಸರ್ಕಾರ ಪಾವತಿಸಿರುವ ಮೊತ್ತವೆಷ್ಟು; ಬಾಕಿ ಇರುವ ಮೊತ್ತವೆಷ್ಟು;

(ಈ) ಬಾಕಿ ಮೊತ್ತ ಪಾವತಿಸುವಲ್ಲಿ ವಿಳಂಬವಾಗಲು ಕಾರಣಗಳೇನು;

(ಉ) ಬಾಕಿ ಮೊತ್ತವನ್ನು ಯಾವ ಕಾಲಮಿತಿಯಲ್ಲಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು?

## ಸಾರ್ವಜನಿಕ ಉದ್ಯಮಗಳಲ್ಲಿ ನಡೆದಿರುವ ಅವ್ಯವಹಾರಗಳು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೧೧ (೧೬೪೪) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಮಾರ್ಚ್–೨೦೧೪ಕ್ಕೆ ಕೊನೆಗೊಂಡಂತೆ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ನಡೆದಿರುವ ಹಲವಾರು ಅವ್ಯವಹಾರಗಳು ನಷ್ಟ ಅನುಭವಿಸುತ್ತಿರುವ ವಿಷಯಗಳ ಬಗ್ಗೆ ವರದಿ ನೀಡಿರುವುದು ನಿಜವೇ;

(ಆ) ಹಾಗಿದ್ದರೆ, ವರದಿಯಲ್ಲಿನ ಅವ್ಯವಹಾರಗಳ ಸ್ವರೂಪ ಮತ್ತು ತಪ್ಪಿತಸ್ಥರ ವಿವರ ನೀಡುವುದು;

(ಇ) ಇದುವರೆವಿಗೆ ವರದಿಯಲ್ಲಿ ತಿಳಿಸಿರುವಂತೆ ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಈ) ಹಲವಾರು ಉದ್ಯಮಗಳು ನಷ್ಟದಲ್ಲಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ನಷ್ಟವನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಮಳವಳ್ಳಿ ಪಟ್ಟಣದ ಪೇಟೆ ಬೀದಿ ರಸ್ತೆ ಅಭಿವೃದ್ಧಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೨೧೨ (೧೬೫೧) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣದ ಅನಂತರಾಮು ವೃತ್ತದಿಂದ ಪೇಟೆ ಬೀದಿಯ ರಸ್ತೆ ಅಭಿವೃದ್ಧಿ ಪಡಿಸಲು ೨೦೧೪–೧೫ ಸಾಲಿನ ಮುಕ್ತ ನಿಧಿ ಅನುದಾನದಡಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ. (ವಿವರ ನೀಡುವುದು)

(ಆ) ಸದರಿ ಕಾಮಗಾರಿಯ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿದೆಯೆ;

(ಇ) ಈ ಕಾಮಗಾರಿಗೆ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರ ನೀಡುವುದು)

(ಈ) ಸದರಿ ರಸ್ತೆಯ ಮುಂದುವರೆದ ಕಾಮಗಾರಿಗೆ ೨೦೧೩–೧೪ನೇ ಸಾಲಿನ ೧೩ನೇ ಹಣಕಾಸು ಯೋಜನೆಯಲ್ಲಿ ಎಷ್ಟು ಮೊತ್ತ ನಿಗದಿಪಡಿಸಲಾಗಿದೆ; (ವಿವರ ನೀಡುವುದು)

(ಉ) ಈ ಕಾಮಗಾರಿಗೆ ಕ್ರಿಯಾಯೋಜನೆ ಅನುಮೋದನೆಗೊಂಡಿದೆಯೆ: ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು?

## ಸಹಕಾರಿ ಸಂಘ ಸಂಸ್ಥೆ ಹಾಗೂ ಬ್ಯಾಂಕ್‌ಗಳ ವ್ಯಾಜ್ಯಗಳ ವಿವರ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೧೨೧೩ (೧೬೫೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಹಕಾರಿ ಸಂಘ ಸಂಸ್ಥೆ ಹಾಗೂ ಬ್ಯಾಂಕ್‌ಗಳ ಸಂಬಂಧ ಸಹಕಾರಿ ಇಲಾಖೆ ಅಧಿಕಾರಿಗಳ ನಡುವೆ ಬಾಕಿ ಇರುವ ವ್ಯಾಜ್ಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವ್ಯಾಜ್ಯಗಳಿಗೆ ತೀರ್ಪು ನೀಡುವಲ್ಲಿ ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಈ) ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಸಹಕಾರಿ ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರ ಚಿಂತಿಸುವುದೆ?

## ಅಲ್ಪ ಸಂಖ್ಯಾತರ ಬಗ್ಗೆ ಸ್ಪಷ್ಟೀಕರಣ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೨೧೪ (೧೬೫೯) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಅಲ್ಪ ಸಂಖ್ಯಾತರು" ಅಂದರೆ ಯಾರು;

(ಆ) ಅಲ್ಲ ಸಂಖ್ಯಾತರು ವ್ಯಾಖ್ಯಾನದಡಿ ಯಾವ ಯಾವ ಧರ್ಮಗಳು ಬರುತ್ತವೆ;

(ಇ) ಸದರಿ ಧರ್ಮಗಳ ಅಡಿಯಲ್ಲಿ ಬರುವ ಜಾತಿ ಮತ್ತು ಉಪ ಜಾತಿಗಳು ಯಾವುವು; (ವಿವರವಾದ ಮಾಹಿತಿ ನೀಡುವುದು)

(ಈ) ಸರ್ಕಾರವು ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ? (ವಿವರವಾದ ಮಾಹಿತಿ ನೀಡುವುದು)

## ರಸ್ತೆ ಅಭಿವೃದ್ಧಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೨೧೫ (೧೬೬೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಗುಬ್ಬಿಯಿಂದ ಸಿ.ಎಸ್. ಪುರದ ರಸ್ತೆಯು ರಾಷ್ಟ್ರೀಯ ಹೆದ್ದಾರಿಯೋ ರಾಜ್ಯ ಹೆದ್ದಾರಿಯೋ ಅಥವಾ ಜಿಲ್ಲಾ ಮುಖ್ಯ ರಸ್ತೆಯೋ; ವಿವರ ನೀಡುವುದು;

(ಆ) ಈ ರಸ್ತೆಯಲ್ಲಿ ತುಂಬಾ ವರ್ಷಗಳಿಂದ ಹಾಳಾಗಿ ಗುಂಡಿಗಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಇ) ಈ ರಸ್ತೆಯನ್ನು ಯಾವ ಕಾಲಮಿತಿಯೊಳಗೆ ದುರಸ್ತಿಪಡಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗುವುದು?

## ಖಾಸಗಿ ಕೃಷಿ ಮಾರುಕಟ್ಟೆ ಸ್ಥಾಪನೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೨೧೬ (೧೬೫೮) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಖಾಸಗಿ ಮಾರುಕಟ್ಟೆ ಸ್ಥಾಪಿಸಲು ಇರುವ ಸರ್ಕಾರದ ನಿಯಮ ಹಾಗೂ ಮಾನದಂಡಗಳೇನು; (ವಿವರ ನೀಡುವುದು)

(ಆ) ಸರ್ಕಾರವು ರೈತರ ಮಂಡಿ ಅಥವಾ ರೈತರ ಮಾರುಕಟ್ಟೆ ಅಥವಾ ಗ್ರಾಮೀಣ ಮಾರುಕಟ್ಟೆ ಸ್ಥಾಪಿಸಲು ಕ್ರಮ ಕೈಗೊಳ್ಳುವುದೇ;

(ಇ) ಈ ಸಂಬಂಧ ಸರ್ಕಾರ ನೀಡುವ ಸಹಾಯಧನ, ಪ್ರೋತ್ಸಾಹ ಧನ ಹಾಗೂ ಮೂಲ ಸೌಲಭ್ಯ ನಿರ್ಮಾಣಕ್ಕಾಗಿ ಬಿಡುಗಡೆ ಮಾಡುವ ಹಣ ಎಷ್ಟು,

(ಈ) ಇಲಾಖೆಯ ಐ.ಇ.ಸಿ. ಕಾರ್ಯಕ್ರಮಗಳು ಯಾವುವು; ಕಳೆದ ವರ್ಷ ಈ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಅನುದಾನ ಎಷ್ಟು; ಖರ್ಚು ಮಾಡಿದ ಮತ್ತು ಉಳಿದ ಹಣ ಎಷ್ಟು? (ವಿವರ ನೀಡುವುದು)

## ನಬಾರ್ಡ್ ನೆರವಿನ ಯೋಜನೆಗಳು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೨೧೭ (೧೬೫೭) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕೋಪಯೋಗಿ ಇಲಾಖೆಯು ಯಾವ ಯಾವ ಯೋಜನೆಗಳಿಗೆ ನಬಾರ್ಡ್‌ನಿಂದ ನೆರವನ್ನು ಪಡೆಯಲಾಗಿದೆ; (ಯೋಜನೆವಾರು ಲೆಕ್ಕಶೀರ್ಷಿಕೆಗಳ ವಿವರ ನೀಡುವುದು)

(ಆ) ಸದರಿ ಯೋಜನೆಯ ನೆರವು ಯಾವ ರೂಪದ್ದಾಗಿದೆ; ಸಾಲವೇ, ಬಡ್ಡಿ ಸಾಲವೇ ಅಥವಾ ಸಹಾಯಧನವೇ; (ವಿವರ ನೀಡುವುದು)

(ಇ) ಈ ಇಲಾಖೆಯಡಿ ಬರುವ ಇತರೆ ಪ್ರಾಧಿಕಾರ, ನಿಗಮ ಮಂಡಳಿ, ಸಂಸ್ಥೆಗಳು ಯಾವುವು; (ವಿವರ ನೀಡುವುದು)

(ಈ) ಅವುಗಳ ಉದ್ದೇಶ, ಗುರಿ, ಕೇಂದ್ರ ಕಛೇರಿ ವಿಳಾಸ ಒಳಗೊಂಡಂತೆ ವಿವರ ನೀಡುವುದು?

## ಸಹಕಾರಿ ಸಂಘಗಳಲ್ಲಿ ಮಹಿಳೆಯರು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೧೨೧೮ (೧೦೭೯) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಿಯದರ್ಶಿನಿ ಯೋಜನೆಯಡಿ ಈವರೆಗೆ ಎಷ್ಟು ಮಹಿಳೆಯರನ್ನು ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರ ಅನುದಾನಗಳನ್ನು ನೀಡಿದೆ;

(ಆ) ಮಾಹಿತಿ ಕೊರತೆಯಿಂದ ಮಹಿಳೆಯರು ಸಹಕಾರ ಚಳುವಳಿಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗದೆ, ಸರ್ಕಾರದ ಪ್ರಿಯದರ್ಶಿನಿ ಯೋಜನೆಯ ಲಾಭಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಕೊಂಡಿದೆ?

## ಕೃಷಿ ವಿಸ್ತರಣಾ ಕೇಂದ್ರಗಳಲ್ಲಿ ನಡೆಯುವ ಕಾರ್ಯಕ್ರಮಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೨೧೯ (೧೬೭೬) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ವಿಶ್ವ ವಿದ್ಯಾಲಯದ ವಿಜಯಪುರ ಸ್ನಾತಕೋತ್ತರ ಕೇಂದ್ರ ಅರಬಾವಿ, ಮುಧೋಳ ಮತ್ತು ವಿಜಯಪುರದಲ್ಲಿರುವ ಕೃಷಿ ವಿಸ್ತರಣಾ ಕೇಂದ್ರಗಳಲ್ಲಿ ನಡೆದಿರುವ ಕಾರ್ಯಕ್ರಮಗಳೇನು; (ಕಾರ್ಯ ಚಟುವಟಿಕೆಗಳ ಸಂಪೂರ್ಣ ವಿವರ ನೀಡುವುದು)

(ಆ) ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಹೆಸರು, ವಿಭಾಗ, ವಿಷಯವಾರು ವಿವರ ನೀಡುವುದು)

## ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಅಭಿವೃದ್ಧಿ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೧೨೨೦ (೧೬೭೫) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು;

(ಆ) ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ನೀಡಿದ ಅನುದಾನ ಎಷ್ಟು; ಇತರೆ ವಿಶ್ವವಿದ್ಯಾಲಯಗಳಿಗೆ ಹೋಲಿಕೆ ಮಾಡಿದಲ್ಲಿ ಕಡಿಮೆ ಅನುದಾನ ನೀಡಲಾಗಿದೆಯೇ; ಹಾಗಿದ್ದಲ್ಲಿ, ಕಾರಣವೇನು;

(ಇ) ರಾಜ್ಯದಲ್ಲಿ ತೋಟಗಾರಿಕಾ ವಲಯಕ್ಕೆ ಯಾವ ಗೈಡ್‌ಲೈನ್ಸ್‌ನ ಆಧಾರದ ಮೇಲೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ;

(ಈ) ಈ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗಿದೆ;

(ಉ) ಹಾವೇರಿಯ ತೋಟಗಾರಿಕಾ ತಂತ್ರಜ್ಞಾನ; ತೋಟಗಾರಿಕಾ ಇಂಜನಿಯರಿಂಗ್ ಕಾಲೇಜಿಗೆ ಎಷ್ಟು ಅನುದಾನ ಮತ್ತು ಎಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ; ತುಳಸಗಿರಿ ಭೂಮಿ ಹಂಚಿಕೆ ಪ್ರಗತಿ ಯಾವ ಹಂತದಲ್ಲಿದೆ;

(ಊ) ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಆವರಣದ ಶಾಶ್ವತ ನೀರು ಸರಬರಾಜಿಗೆ ಏನು ಕ್ರಮ ವಹಿಸಲಾಗಿದೆ?

## ರಾಜ್ಯದ ಕೃಷಿ ಮಾರುಕಟ್ಟೆ ಉನ್ನತೀಕರಿಸುವುದು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೨೧ (೧೬೫೫) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಈ ಮಾರುಕಟ್ಟೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆವಾರು ಮಂಜೂರು, ಭರ್ತಿ, ಖಾಲಿಯಿರುವ ವಿವರ ನೀಡುವುದು)

(ಆ) ಸದರಿ ಕೃಷಿ ಮಾರುಕಟ್ಟೆಗಳಲ್ಲಿ ಮಂಜೂರಾದ ತಾಂತ್ರಿಕ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳು ಭರ್ತಿ ಆಗಿವೆ; ಎಷ್ಟು ಹುದ್ದೆಗಳು ಖಾಲಿ ಇವೆ ಮತ್ತು ಖಾಲಿ ಇರುವುದಕ್ಕೆ ಕಾರಣಗಳೇನು; (ವಿವರಿಸುವುದು)

(ಇ) ಈ ಕೃಷಿ ಮಾರುಕಟ್ಟೆಗಳಲ್ಲಿ ಜಾರಿಗೆ ತರಲಾಗಿರುವ ಆನ್‌ಲೈನ್ ಪದ್ಧತಿಯ ಅನುಕೂಲ ಹಾಗೂ ಅನಾನುಕೂಲಗಳೇನು;

(ಈ) ಇದಕ್ಕಾಗಿ ಪ್ರತ್ಯೇಕ ಪರಿಣಿತ ಸಿಬ್ಬಂದಿಗಳನ್ನು ಸರ್ಕಾರದಿಂದ ನಿಯೋಜಿಸಲಾಗಿದೆಯೇ ಅಥವಾ ಇಲ್ಲವೆ:

(ಉ) ಇಲ್ಲವಾದಲ್ಲಿ ಕಾರಣಗಳೇನು; ಇದರ ನಿರ್ವಹಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಊ) ಕೃಷಿ ಮಾರುಕಟ್ಟೆ ಸಮಿತಿಗಳ ಹಾಗೂ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಉನ್ನತೀಕರಿಸಲು ಸರ್ಕಾರ ರೂಪಿಸಿದ ಯೋಜನೆಗಳಾವುವು?

## ಯಲಬುರ್ಗಾ ಪಟ್ಟಣ ನೀರು ಸರಬರಾಜು ಕುರಿತು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೨೨ (೧೬೫೪) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ಕೊಪ್ಪಳ ಉಪವಿಭಾಗ ಇವರು ಕೈಗೊಂಡಿರುವ ಯಲಬುರ್ಗಾ ಪಟ್ಟಣಕ್ಕೆ ಕೊಳವೆ ನೀರು ಸರಬರಾಜು ಯೋಜನೆ ಸಧ್ಯ ಯಾವ ಹಂತದಲ್ಲಿದೆ;

(ಆ) ಸದರಿ ಯೋಜನೆ ಶಂಕುಸ್ಥಾಪನೆಯಾಗಿದ್ದು ಯಾವಾಗ;

(ಇ) ಈ ಯೋಜನೆಗಾಗಿ ಕಾಯ್ದಿರಿಸಲಾದ ಒಟ್ಟು ಅನುದಾನ ಎಷ್ಟು;

(ಈ) ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು ಯಾವಾಗ;

(ಉ) ಗುತ್ತಿಗೆಯನ್ನು ಯಾವ ಏಜೆನ್ಸಿಗೆ ನೀಡಲಾಗಿದೆ ಮತ್ತು ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಯಾವ ಅವಧಿಯೊಳಗೆ ಮುಕ್ತಾಯಗೊಳಿಸಲು ಸೂಚಿಸಲಾಗಿದೆ;

(ಊ) ಆದಾಗ್ಯೂ ಕಾಮಗಾರಿ ಕುಂಠಿತಗೊಂಡಿರಲು ಕಾರಣವೇನು; ಪ್ರಗತಿಯಂತೆ ಕಾಮಗಾರಿಯನ್ನು ಯಾವ ಅವಧಿಯೊಳಗೆ ಲೋಕಾರ್ಪಣೆ ಮಾಡಲಾಗುವುದು?

## ಕೊಪ್ಪಳ ಜಿಲ್ಲೆಯಲ್ಲಿ ನಗರೋಥ್ಥಾನ ಕಾಮಗಾರಿಗಳ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೨೩ (೧೬೫೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ನಗರೋಥ್ಥಾನ ಯೋಜನೆಗಳಿಗೆ ಕಳೆದ ೩ ವರ್ಷಗಳಲ್ಲಿ ಮಂಜೂರಾದ ಅನುದಾನ ಎಷ್ಟು;

(ಆ) ಕಾಮಗಾರಿಗಳ ಅನುಷ್ಠಾನಕ್ಕಾಗಿ ಯಾವ ಗುತ್ತಿಗೆದಾರರನ್ನು ಅಥವಾ ಏಜೆನ್ಸಿಯವರನ್ನು ನೇಮಕ ಮಾಡಲಾಗಿದೆ;

(ಇ) ಗುತ್ತಿಗೆ ಕರಾರಿನನ್ವಯ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸೂಚಿಸಿದ ದಿನಾಂಕಗಳನ್ನು ಕಾಮಗಾರಿವಾರು ನೀಡುವುದು;

(ಈ) ಸದರಿ ಕಾಮಗಾರಿಗಳು ಸಧ್ಯ ಯಾವ ಹಂತದಲ್ಲಿದೆ; ಅಪೂರ್ಣಗೊಂಡ ಕಾಮಗಾರಿಗಳು ಯಾವುವು; ಕಾಮಗಾರಿ ಅಪೂರ್ಣಗೊಳ್ಳಲು ಕಾರಣಗಳೇನು?

## ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳ ಕುರಿತು

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೧೨೨೪ (೧೨೯೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳು ಎಷ್ಟು; ಇಲ್ಲವಾದಲ್ಲಿ, ಸೂಕ್ತವಾದ ಕಾರಣ ತಿಳಿಸುವುದು;

(ಆ) ಜಿಲ್ಲೆಯಲ್ಲಿ ಹೊಸದಾಗಿ ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳೇನಾದರು ಸರ್ಕಾರದ ಮುಂದೆ ಇದೆಯೇ; (ಇದ್ದಲ್ಲಿ, ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಇಂತಹ ಒಟ್ಟು ಎಷ್ಟು ಯೋಜನೆಗಳಿವೆ; ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆಯಾಗುತ್ತಿದೆ?

## ಚಿತ್ರದುರ್ಗ ಮತ್ತು ದಾವಣಗರೆ ಜಿಲ್ಲೆಯಲ್ಲಿರುವ ವಿಂಡ್‌ಪವರ್ ಕಂಬಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) –**

೧೨೨೫ (೧೭೮೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಅಳವಡಿಸಿರುವ ವಿಂಡ್‌ಪವರ್ ಕಂಬಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

(ಆ) ಪ್ರತಿಯೊಂದು ವಿಂಡ್‌ಪವರ್ ಕಂಬಗಳಿಂದ ಸರ್ಕಾರಕ್ಕೆ ವರ್ಷಕ್ಕೆ ಬರುತ್ತಿರುವ ಹಣ ಎಷ್ಟು; ಒಟ್ಟು ಕಂಬಗಳ ಮಾಹಿತಿ ನೀಡುವುದು;

(ಇ) ಯಾವ ಯಾವ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ? (ಮಾಹಿತಿ ನೀಡುವುದು)

## ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಸಿಗುವ ಸವಲತ್ತುಗಳ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೨೨೬ (೧೬೬೩) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ತೋಟಗಾರಿಕೆ ಇಲಾಖೆ ವತಿಯಿಂದ ಯಾವ ಯಾವ ಸಹಾಯವನ್ನು ಒದಗಿಸಿ ಕೊಡಲಾಗುವುದು;

(ಆ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ರೈತರಿಗೆ ಯಾವ ಯಾವ ಸಹಾಯ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ತೋಟಗಾರಿಕಾ ಇಲಾಖೆಯಿಂದ ರೈತರಿಗೆ ಉತ್ತಮ ತಳಿಯ ಹಣ್ಣಿನ ಹಾಗೂ ತೆಂಗಿನ ಸಸಿಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ;

(ಈ) ಪೂರೈಸುತ್ತಿದ್ದಲ್ಲಿ ಎಲ್ಲಿ ಹೇಗೆ, ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಮೊತ್ತದ ಸಸಿಗಳನ್ನು ಪೂರೈಸಲಾಗುತ್ತಿದೆ; (ವಿವರ ನೀಡುವುದು)

(ಉ) ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರಿ ಫಾರಂಗಳಿಗಿಂತಲೂ ಖಾಸಗಿ ಫಾರಂಗಳಲ್ಲಿ ಉತ್ತಮ ತಳಿಯ ಸಸಿಗಳು ಸಿಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಬೆಳಗಾವಿ ಜಿಲ್ಲೆ ಖಾನಾಪೂರ ಗ್ರಾಮದ ಕಕ್ಕೇರಿ ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಉತ್ತಮ ಕಸಿ ಮಾಡಿದ ಹಣ್ಣಿನ ಗಿಡಗಳನ್ನು ಮಹಾರಾಷ್ಟ್ರ ಹಾಗೂ ಬೇರೆ ರಾಜ್ಯದ ಜನರು ಮತ್ತು ಸರ್ಕಾರ ಖರೀದಿ ಮಾಡುತ್ತಿದ್ದು ಕರ್ನಾಟಕ ರಾಜ್ಯ ಈ ಭಾಗದ ರೈತರಿಗೆ ಯಾವುದೇ ಉತ್ತೇಜನ ಕೊಡದೆ ಇದ್ದ ಸಂಗತಿ ನಿಜವೆ:

(ಋ) ಸರ್ಕಾರವು ಒಬ್ಬ ಉನ್ನತ ಮಟ್ಟದ ಅಧಿಕಾರಿಯನ್ನು ಈ ಸ್ಥಳಕ್ಕೆ ಕಳುಹಿಸಿ ಯಾವ ರೀತಿಯಲ್ಲಿ ರೈತರಿಗೆ ಸಹಾಯ ಮಾಡಲು ಸಾಧ್ಯವಾಗುವುದೆ ಎಂಬುದನ್ನು ಪರಿಶೀಲಿಸಲಾಗುವುದೇ?

## ರೈತರ ಹೊಲದಲ್ಲಿ ಸುಟ್ಟ ಟಿ.ಸಿ.ಗಳನ್ನು ಕೂಡಲೇ ಇಲಾಖೆಯಿಂದ ಅಳವಡಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೨೨೭ (೧೬೬೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರ ಹೊಲದಲ್ಲಿ ಇಲಾಖೆ ವತಿಯಿಂದ ಅಳವಡಿಸಿದ ಟಿ.ಸಿ.ಗಳು ಸುಟ್ಟು ಹೋದಲ್ಲಿ ಎಷ್ಟು ದಿನಗಳೊಳಗಾಗಿ ಅವುಗಳನ್ನು ಇಲಾಖೆಯವರು ಅಳವಡಿಸಬೇಕು ; ರೈತರು ಟಿ.ಸಿ. ಸುಟ್ಟ ಬಗ್ಗೆ ಯಾರಿಗೆ ತಿಳಿಸಬೇಕು; ತಿಳಿಸಿದ ಎಷ್ಟು ದಿನಗಳೊಳಗಾಗಿ ಇಲಾಖೆಯವರು ಹೊಸ ಟಿ.ಸಿ. ಅಳವಡಿಸುವರು; ಇಲಾಖೆಯವರೇ ತಮ್ಮ ವಾಹನದಿಂದ ತಂದು ಅಳವಡಿಸುವರೆ ಅಥವಾ ರೈತರೇ ತಮ್ಮ ಟ್ರಾಕ್ಟರ್ ತಂದಾಗ ಮಾತ್ರ ಇಲಾಖೆಯವರು ಟಿ.ಸಿ. ಕೊಡುವರೋ ತಿಳಿಸುವುದು;

(ಆ) ಬೆಳಗಾವಿ ಜಿಲ್ಲೆಯಲ್ಲಿ ಇಲಾಖೆಯವರು ಅವಳವಡಿಸಿದ ಟಿ.ಸಿ.ಗಳು ಸುಟ್ಟಾಗ ಇಲಾಖೆಗೆ ತಿಳಿಸಿದರೂ ಇಲಾಖೆಯಲ್ಲಿ ಟಿ.ಸಿ.ಗಳು ಇರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಟಿ.ಸಿ. ಅಳವಡಿಸದೆ ಇದ್ದಲ್ಲಿ ರೈತರ ಬೆಳೆಗಳು ನಾಶವಾದಲ್ಲಿ ಇದಕ್ಕೆ ಜವಾಬ್ದಾರಿ ಯಾರು; ಬೆಳೆ ನಾಶವಾದ ಬಗ್ಗೆ ಪರಿಹಾರ ಯಾರು ಕೊಡುವರು; ಇದಕ್ಕೆ ರೈತರು ಯಾರನ್ನು ಸಂಪರ್ಕಿಸಬೇಕು;

(ಈ) ರೈತರ ಹೊಲದಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದು, ಕಬ್ಬಿನ ಗದ್ದೆ ಸುಡಲು ಹತ್ತಿದ್ದರೂ ಕೂಡ ಮತ್ತೊಂದು ಕಂಬ ಹಾಗೂ ಅದಕ್ಕೆ ಉಪಕರಣ ಮತ್ತು ತಂತಿ ಬೇಕಾದ ಸಂದರ್ಭದಲ್ಲಿ ಅವಶ್ಯವಿರುವ ಕಂಬ ಹಾಕಲು ತಂತಿಯನ್ನು ಯಾರು ತರಬೇಕು;

(ಉ) ಕಡಿಮೆ ವೋಲ್ಟೇಜ್‌ದಿಂದ ರೈತರ ಪಂಪ್‌ಸೆಟ್ ಸುಡುತ್ತಿದ್ದು ಇದಕ್ಕೆ ಯಾರು ಜವಾಬ್ದಾರರು; ಇಲಾಖೆಯ ಅಧಿಕಾರಿಗಳು ರೈತರಿಗೆ ಸರಿಯಾಗಿ ವೋಲ್ಟೇಜ್ ಬರುತ್ತಿದೆಯೋ ಇಲ್ಲವೋ ಎಂದು ತಪಾಸಣೆ ಮಾಡುವರೇ; ಹಾಗಿದ್ದಲ್ಲಿ ಕಳೆದ ವರ್ಷ ಮತ್ತು ಈ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಟಿ.ಸಿ.ಗಳನ್ನು ಎಷ್ಟು ಸ್ಥಳಗಳಲ್ಲಿ ತಪಾಸಣೆ ಮಾಡಿರುವರು;

(ಊ) ಹೊಸದಾಗಿ ರೈತರಿಗೆ (ಹತ್ತು ಎಸ್.ಪಿ. ಒಳಗೆ) ವಿದ್ಯುತ್ ಬೇಕಾದಲ್ಲಿ ಯಾರಿಗೆ ಅರ್ಜಿ ಕೊಡಬೇಕು: ಯಾವ ಯಾವ ಕ್ರಮಗಳನ್ನು ಅನುಸರಿಸಬೇಕು?

## ಕೃಷಿ ಮಾರುಕಟ್ಟೆಯಲ್ಲಿ ಸುಧಾರಣೆ ತರುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೨೨೮ (೧೬೬೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿ ಕೃಷಿ ಮಾರುಕಟ್ಟೆಯಲ್ಲಿ ಯಾವ-ಯಾವ ಸುಧಾರಣೆಗಳನ್ನು ತರಲಾಗಿದೆ;

(ಆ) ಮಹಾರಾಷ್ಟ್ರ ರಾಜ್ಯದಲ್ಲಿ ರೈತರಿಗೆ ಅನ್ಯಾಯವಾಗದಂತೆ ಕೃಷಿ ಮಾರುಕಟ್ಟೆಯಲ್ಲಿ ಸುಧಾರಣೆ ತಂದಿದ್ದು, ಅದೇ ರೀತಿ ಕರ್ನಾಟಕದಲ್ಲಿ ಸುಧಾರಣೆ ತರಲು ಹಿರಿಯ ಅಧಿಕಾರಿಗಳನ್ನು ಅಲ್ಲಿಯ ವ್ಯವಸ್ಥೆ ಅಭ್ಯಸಿಸಿ ಕ್ರಮ ಕೈಗೊಳ್ಳಲು ಕಳುಹಿಸಲಾಗುವುದೆ;

(ಇ) ಮಹಾರಾಷ್ಟ್ರದಲ್ಲಿ ಕಾಳು-ಕಡ್ಡಿಗೆ ಸೇಲ್ಸ್ ಟ್ಯಾಕ್ಸ್, ಮಾರ್ಕೆಟ್ ಸೆಸ್ ಇದ್ದು ಗಡಿ ಭಾಗದ ಜನರು ತಮ್ಮ ಎಲ್ಲ ಸರಕುಗಳನ್ನು ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಮೊದಲಾದ ಸ್ಥಳಗಳಿಗೆ ಒಯ್ದು ಮಾರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಇದರಿಂದ ಕರ್ನಾಟಕ ರಾಜ್ಯದ ರೈತರಿಗೆ ಹಾಗೂ ಸರ್ಕಾರಕ್ಕೆ ಅನ್ಯಾಯವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಹಾಗಿದ್ದಲ್ಲಿ, ಸುಧಾರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

## ಲೋಕೋಪಯೋಗಿ ಇಲಾಖೆಯಲ್ಲಿರುವ ಪೆಂಡಿಂಗ್ ಬಿಲ್ಲು ಹಣದ ವಿವರ ಒದಗಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೨೨೯ (೧೬೬೨) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಲೋಕೋಪಯೋಗಿ ಇಲಾಖೆಯಲ್ಲಿರುವ ಪೆಂಡಿಂಗ್ ಬಿಲ್ಲುಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಎಷ್ಟು ಪೆಂಡಿಂಗ್ ಬಿಲ್ಲು ಇರುವುದು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಇನ್ನು ಎಷ್ಟು ದಿನಗಳೊಳಗಾಗಿ ಪೆಂಡಿಂಗ್ ಬಿಲ್ಲಿನ ಹಣವನ್ನು ಪಾವತಿಸಲಾಗುವುದು;

(ಈ) ಗುತ್ತಿಗೆದಾರರ ಬಿಲ್ಲಿನ ಹಣವನ್ನು ಪಾವತಿಸದೆ ಇರುವುದರಿಂದ ಕೆಲಸಗಳು ಸ್ಥಗಿತಗೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

## ಹಾಪ್ ಕಾಮ್ಸ್‌ಗಳ ಅಸಮರ್ಪಕ ಕಾರ್ಯನಿರ್ವಹಣೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) –**

೧೨೩೦ (೧೩೧೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಪ್‌ಕಾಮ್ಸ್‌ಗಳ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಡೆಸಿದ ವಹಿವಾಟು ಎಷ್ಟು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಹಲವಾರು ಹಾಪ್‌ಕಾಮ್ಸ್‌ಗಳು ಸಾರ್ವಜನಿಕರ ಅವಶ್ಯಕ ಸಮಯದಲ್ಲೇ ಕಾರ್ಯನಿರ್ವಹಿಸದೇ ಇರುವುದನ್ನು ಸರ್ಕಾರ ಪರಿಗಣಿಸಿದೆಯೇ; ಹಾಗಿದ್ದಲ್ಲಿ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಗಿದೆ;

(ಇ) ತರಕಾರಿ, ಹಣ್ಣು ಬೆಳೆದ ರೈತರಿಗೆ ಸೂಕ್ತ ಬೆಲೆ, ಸಾರ್ವಜನಿಕರಿಗೆ ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕ ದರದಲ್ಲಿ ಉತ್ತಮ, ತಾಜಾ, ಕ್ರಿಮಿನಾಶಕ ಪ್ರಮಾಣ ಕಡಿಮೆ ಇರುವ ದಿನನಿತ್ಯದ ಅವಶ್ಯಕ ವಸ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ಹಾಪ್‌ಕಾಮ್ಸ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವ ಅಂಶವನ್ನು ಸರ್ಕಾರವು ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ನಿರ್ದೇಶಕರು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ